ಬೆಲೆ ರೂ.2.50 WPP No. SK/MNG/WPP/69
D.O.P - 15th of every month from Udupi Sorting Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಅಕ್ಟೋಬರ್ 2013

॥ ಧಿಯೋ ಯೋನಃ ಪ್ರಚೋದಯಾತ್ ॥

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.

Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-13 ಸಂಚಿಕೆ-10 ಪುಟಗಳು-8 Registered Under No.J/UDP/1260/2012-2014 Dated from 01-01-2012 to 31-12-2014.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

# ವಾರ್ಷಿಕ ಮಹಾ ಸಭೆ



**ದಿನಾಂಕ 29–09–2013ರಂದು ಉಡುಪಿ ಕುಂಜಿಬೆಟ್ಟಿನ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಮಹಾಸಭೆಯು ಸಂಘದ ಅಧ್ಯಕ್ಷರಾದ ಶ್ರೀ ಯು.ಪ್ರಫುಲ್ಲ ಚಂದ್ರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ವೇದಿಕೆಯಲ್ಲಿ ಕಾರ್ಯದರ್ಶಿ, ಕೋಶಾಧಿಕಾರಿ ಯಲ್ಲದೆ ಸಂಘದ ಸಲಹೆಗಾರರಾದ ಶ್ರೀ ಎ.ರಮೇಶ ಶ್ಯಾನುಭಾಗ್ ಸತಾರ (ಶಾರದಾ ಮಂಟಪದ ನಿರ್ಮಾತೃಗಳಲ್ಲಿ ಒಬ್ಬರಾದ ಅಲೆವೂರು ಶ್ಯಾಮರಾಯರ ಪುತ್ರ) ಹಾಗೂ ಪೂರ್ವಾಧ್ಯಕ್ಷರಾದ ಶ್ರೀ ಪಾಲಚಂದ್ರ ರಾಯರು ಉಪಸ್ಥಿತರಿದ್ದರು.**

ಶ್ರೀಮತಿ ಜಯಲಕ್ಷ್ಮೀ ಮುರಳೀಧರ ರಾವ್‌ರವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಸಭೆಯಲ್ಲಿ ಅಧ್ಯಕ್ಷರಾದ ಪ್ರಫುಲ್ಲಚಂದ್ರರಾಯರು ಎಲ್ಲರನ್ನೂ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಸಂಘವು ಪ್ರಾರಂಭಗೊಂಡು ಸುಮಾರು 50 ವರ್ಷಗಳಾಗುತ್ತಾ ಬಂದಿದೆ. ಹಿರಿಯರ ಆಶಯದಂತೆ ಸ್ಥಾನಿಕ ಬ್ರಾಹ್ಮಣರಿಗಾಗಿ ಒಂದು ಕಲ್ಯಾಣ ಮಂಟಪವನ್ನು ಕಟ್ಟಲಾಗಿದೆ. ರಜತಮಹೋತ್ಸವ ಸಂದರ್ಭದಲ್ಲಿ ದಾನಿಗಳ ಸಹಕಾರದಿಂದ ಹಾಲ್ ನಿರ್ಮಾಣ ಮಾಡಲಾಗಿದ್ದು, ಈಗ ಊಟದ ಹಾಲ್ ಹಾಗೂ ಮುಂದಿನ ಹಂತದಲ್ಲಿ ಸುವರ್ಣ ಮಹೋತ್ಸವ ನೆನಪಿಗಾಗಿ ಮೇಲೆ ಸಭಾಂಗಣ ಕಟ್ಟಲು ನಿಶ್ಚಯಿಸಲಾಗಿದೆ. ಮುಂದಿನ ಜನವರಿ ತಿಂಗಳಿಂದ ಈ ಕೆಲಸ ಪ್ರಾರಂಭಿಸುವುದೆಂದು ಆಡಳಿತ ಮಂಡಳಿಯು ನಿರ್ಣಯಿಸಿದೆ ಎಂದು ಸಭೆಗೆ ತಿಳಿಸಿದರು.

ನಂತರ ಅಧ್ಯಕ್ಷರ ಸೂಚನೆಯಂತೆ 2012–13ರಲ್ಲಿ ಅಗಲಿದ ಸಮಾಜ ಬಾಂಧವರಿಗಾಗಿ ಎಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನ ಪ್ರಾರ್ಥನೆ ಸಲ್ಲಿಸಿದರು.

2012–13ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸನ್ನು ಕಾರ್ಯದರ್ಶಿಯವರು ಓದಿದರು. ಅದನ್ನು ಸಭೆಯು ಅಂಗೀಕರಿಸಿತು.

2011–12ನೇ ಸಾಲಿನ ವಾರ್ಷಿಕ ಮಹಾಸಭೆಯ ವರದಿಯನ್ನು ಕಾರ್ಯದರ್ಶಿ ಅರವಿಂದ ಕುಮಾರ್ ಸಭೆಯಲ್ಲಿ ಓದಿ ಅನುಮೋದನೆ ಪಡೆದುಕೊಂಡರು.

2012–13ನೇ ಸಾಲಿನ ಕಾರ್ಯಕ್ರಮ ವರದಿಯಲ್ಲಿ ಪುಸ್ತಕದಲ್ಲಿ ನೀಡಲಾಗಿದ್ದು, ಯಾವುದೇ ಬದಲಾವಣೆ ಇದ್ದಲ್ಲಿ ತಿಳಿಸಲು ಅಧ್ಯಕ್ಷರು ಸಭೆಯಲ್ಲಿ ಹೇಳಿದಾಗ, ಸಣ್ಣಪುಟ್ಟ ಬದಲಾವಣೆಯೊಂದಿಗೆ ಕಾರ್ಯದರ್ಶಿಯವರು ಮಂಡಿಸಿ ಅನುಮೋದನೆ ಪಡೆದರು.

2012–13ನೇ ವರ್ಷದ ಆಯ–ವ್ಯಯ ಮತ್ತು ಆಸ್ತಿ–ಜವಾಬ್ದಾರಿ ತಃಖ್ತೆಯು ಪರಿಶೋಧಿತ ವರದಿಯನ್ನು ಕೋಶಾಧಿಕಾರಿಯವರು ಸಭೆಗೆ ತಿಳಿಸಿದಾಗ ಸದಸ್ಯರು ಕೆಲವೊಂದು ಮಾಹಿತಿಯನ್ನು ಕೇಳಿದರು. ಅದಕ್ಕೆ ಸೂಕ್ತ ಉತ್ತರವನ್ನು ಅಧ್ಯಕ್ಷರು ಹಾಗೂ ಕಾರ್ಯದರ್ಶಿ ನೀಡಿದರು. ಹಾಗೆಯೇ ಸಭೆಯಲ್ಲಿ 2013–14ರ ಅಂದಾಜು ಆಯ–ವ್ಯಯದ ಬಗ್ಗೆ ಚರ್ಚಿಸಿ ಅಂಗೀಕಾರ ಪಡೆಯಲಾಯಿತು. ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯದಂತೆ ಈಗಿರುವ ಅಡುಗೆ ಕೋಣೆ, ಊಟದ ಹಾಲ್ ರಿಪೇರಿ ಮಾಡಿ ಮುಂದಿನ ಹಂತದಲ್ಲಿ ಸುವರ್ಣ ಭವನಕ್ಕಾಗಿ ಮೇಲಿನ ಮಹಡಿ ಕಟ್ಟುವ ಬಗ್ಗೆ ಮುಂದೆ ವಿಶೇಷ ಸಭೆ ಕರೆದು ಅಂಗೀಕಾರ ಪಡೆದುಕೊಳ್ಳಲು ಸಭೆಯು ನಿರ್ಧರಿಸಿತು.

2013–14ನೇ ವರ್ಷದ ಲೆಕ್ಕ ಪರಿಶೋಧಕರಾಗಿ ಗಣೇಶ ಹೆಬ್ಬಾರ್ (ಹೆಬ್ಬಾರ್ ಅಸೋಸಿಯೇಟ್ಸ್)ರನ್ನು ನೇಮಿಸಲಾಯಿತು.

ಪೂರ್ವಾಧ್ಯಕ್ಷರಾದ ಶ್ರೀ ಎಂ. ಪಾಲಚಂದ್ರರಾಯರು ಹಾಗೂ ರಮೇಶ ಶ್ಯಾನುಭಾಗ್ ಸಮಯೋಚಿತವಾಗಿ ಮಾತನಾಡಿದರು. ಖಾಲಿ ಇರುವ ಸ್ಥಾನಕ್ಕಾಗಿ ಮಾಂಟ್ರಾಡಿ ಮೋಹನ್ ರಾವ್‌ರವರನ್ನು ಆಡಳಿತ ಮಂಡಳಿಯ ಸದಸ್ಯರಾಗಿ ಆರಿಸಲಾಯಿತು.

ಕೊನೆಯಲ್ಲಿ ಜತೆ ಕಾರ್ಯದರ್ಶಿ ಕೃಷ್ಣ ಕುಮಾರ್ ರಾವ್ ಮಟ್ಟು ವಂದಿಸಿದರು.

## ಶ್ರೀ ಶಾರದಾ ಕ್ರೆಡಿಟ್ ಕೊ–ಆಪರೇಟಿವ್ ಸೊಸೈಟಿ

# ವಾರ್ಷಿಕ ಮಹಾ ಸಭೆ




**ಉಡುಪಿಯ ಶ್ರೀ ಶಾರದಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ರಿ) ಇದರ ವಾರ್ಷಿಕ ಮಹಾಸಭೆಯು ದಿನಾಂಕ 22–09–2013ರಂದು ವಾದಿರಾಜ ರಸ್ತೆಯಲ್ಲಿರುವ ಭೂವರಾಹ ಕಾಂಪ್ಲೆಕ್ಸ್‌ನ ಸಭಾ ಭವನದಲ್ಲಿ ನೆರವೇರಿತು.**


ಶ್ರೀಮತಿ ಭಾರತಿಯವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಸದಾನಂದರಾಯರು ನಿರ್ವಹಿಸಿ, ಎಲ್ಲರನ್ನು ಸ್ವಾಗತಿಸಿದರು, ಅವರು ತಮ್ಮ ಪ್ರಾಸ್ತಾವಿಕ ಮಾತುಗಳಲ್ಲಿ 2012–13ನೇ ಸಾಲಿನ ಅಂತ್ಯದಲ್ಲಿ ಸಂಸ್ಥೆಯು ರೂ.5 ಕೋಟಿ 21 ಲಕ್ಷ ಠೇವಣಿ ಹೊಂದಿದ್ದು, ಸುಮಾರು 5 ಕೋಟಿ 54 ಲಕ್ಷ ದುಡಿಯುವ ಬಂಡವಾಳ ಹೊಂದಿರುತ್ತದೆ. 2012–13ನೇ ಸಾಲಿನಲ್ಲಿ ಸುಮಾರು 4 ಕೋಟಿ 29 ಲಕ್ಷ ಸಾಲ ನೀಡಲಾಗಿದ್ದು. ಸಂಸ್ಥೆಯು 6.06 ಲಕ್ಷ ನಿವ್ವಳ ಲಾಭವನ್ನು ದಾಖಲಿಸಿದೆ ಎಂದು ತಿಳಿಸಲು ಸಂತೋಷಪಡುತ್ತೇವೆ. ಕುಕ್ಕಿಕಟ್ಟೆ ಹಾಗೂ ಪಡುಬಿದ್ರೆ ಶಾಖೆಗಳು ತೃಪ್ತಿಕರವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಉತ್ತಮ ಪ್ರಗತಿಯ ನಿರೀಕ್ಷೆಯಲ್ಲಿದ್ದೇವೆ, ಸಂಸ್ಥೆಯ ಠೇವಣಿ ಹಾಗೂ ಪಾಲುಬಂಡವಾಳ ಹೆಚ್ಚಿಸುವರೆ ಸದಸ್ಯ ಬಾಂಧವರು ಹೆಚ್ಚಿನ ಸಹಕಾರ ನೀಡಬೇಕು ಎಂದು ನುಡಿದರು.

ಸಂಘದ ಸದಸ್ಯರಿಗೆ 12% ಲಾಭಾಂಶವನ್ನು ಈ ಬಾರಿ ನೀಡುತ್ತಿರುವುದಾಗಿ ಸಭೆಗೆ ತಿಳಿಸಿದರು. ಕರ್ನಾಟಕ ಸಹಕಾರ ಸಂಘಗಳ ಅಧಿಸೂಚನೆ ಪ್ರಕಾರ ಸಂಘದ ಮೂಲ ಉಪನಿಬಂಧನೆಗಳಿಗೆ ತಿದ್ದುಪಡಿ ಜಾರಿಯಾಗಿದ್ದು, ಸಮಗ್ರ ಬೈಲಾ ತಿದ್ದುಪಡಿಯ ಪ್ರಸ್ತಾಪವನ್ನು ಅಂಗೀಕಾರಕ್ಕಾಗಿ ಮಹಾಸಭೆಯ ಮುಂದೆ ಪ್ರಸ್ತುತಪಡಿಸುತ್ತಿದ್ದೇವೆ ಎಂದು ಅಧ್ಯಕ್ಷರು ತಿಳಿಸಿದರು.

ಸಂಘದ ಕಾರ್ಯದರ್ಶಿ ಶ್ರೀ ಪಟ್ಟಾಭಿರಾಮ ಎನ್. ಎಸ್. ರವರು ಸಂಘದ 2012–13ನೇ ಸಾಲಿನ ವಾರ್ಷಿಕ ವರದಿ, ಲಾಭ–ನಷ್ಟದ ತಖ್ತೆ, ಆಸ್ತಿ–ಜವಾಬ್ದಾರಿ ತಖ್ತೆ, 2013–14ನೇ ಸಾಲಿನ ಅಂದಾಜು ಆಯ–ವ್ಯಯ ತಖ್ತೆಗಳನ್ನು ಮಹಾಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದರು. ತಿದ್ದುಪಡಿಯಾದ ಉಪನಿಬಂಧನೆಗಳು ಅನುಮೋದನೆಗೊಂಡವು. ಸದಸ್ಯರ ಕೆಲವು ಪ್ರಶ್ನೆಗಳಿಗೆ ಸೂಕ್ತ ಚರ್ಚೆಗಳೊಂದಿಗೆ ಉತ್ತರ ನೀಡಲಾಯಿತು. ಉಪಾಧ್ಯಕ್ಷರಾದ ಶ್ರೀ ವೇಣುಗೋಪಾಲರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕೊನೆಯಲ್ಲಿ ಕುಕ್ಕಿಕಟ್ಟೆ ಶಾಖಾ ವ್ಯವಸ್ಥಾಪಕರಾದ ಶ್ರೀ ವಿಶ್ವನಾಥರಾವ್ ಧನ್ಯವಾದ ಸಮರ್ಪಿಸಿದರು. ಸದಸ್ಯರೆಲ್ಲರಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲಾಗಿತ್ತು.

## ಶ್ರೀ ಶಾರದಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ರಿ.)

# ಅಧ್ಯಕ್ಷರಾಗಿ ಶ್ರೀ ಮಾರ್ಪಳ್ಳಿ ಸದಾನಂದರಾಯರು ಪುನರಾಯ್ಕೆ



ಶ್ರೀ ಶಾರದಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ರಿ.) ಉಡುಪಿ ಇದರ ಉಳಿದ ಎರಡೂವರೆ ವರ್ಷಗಳ ಅವಧಿಗೆ ಹಾಲಿ ಅಧ್ಯಕ್ಷರಾಗಿರುವ ಶ್ರೀ ಎಂ. ಸದಾನಂದ ರಾವ್ ಚಿಟ್ಪಾಡಿ ಅಧ್ಯಕ್ಷರಾಗಿ ಹಾಗೂ ಶ್ರೀ ವೇಣುಗೋಪಾಲರಾವ್ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ದಿನಾಂಕ 26–09–2013ರಂದು ಪದಾಧಿಕಾರಿಗಳ ಆಯ್ಕೆಗಾಗಿ ನಡೆದ ಮಂಡಳಿ ನಿರ್ದೇಶಕ ಸಭೆಯಲ್ಲಿ ಚುನಾವಣಾಧಿಕಾರಿ ಜಯಂತಿ ಎಸ್.ರವರು "ಬೇರೆ ಅಭ್ಯರ್ಥಿಗಳ ನಾಮಪತ್ರ ಇಲ್ಲದೇ ಇರುವುದರಿಂದ ಮುಂದಿನ ಅವಧಿಗೆ ಅವಿರೋಧವಾಗಿ ಸರ್ವಾನುಮತದಿಂದ ಆಯ್ಕೆ ನೆರವೇರಿದೆ" ಎಂದು ಘೋಷಿಸಿದರು. ಸಭೆಯಲ್ಲಿ ನಿರ್ದೇಶಕರಾದ ಎಂ. ಸದಾನಂದ ರಾವ್, ಕೆ. ವೇಣುಗೋಪಾಲ ರಾವ್, ಶ್ರೀಮತಿ ಗೀತಾ ಕೆ. ರಾವ್, ಯು. ಪ್ರಫುಲ್ಲಚಂದ್ರ ರಾವ್, ಕೆ. ಮಂಜುನಾಥ ಹೆಬ್ಬಾರ್, ಯು. ಅರವಿಂದ ಕುಮಾರ್, ವೈ. ಪ್ರಕಾಶ್ ಕುಮಾರ್, ವೈ. ಮುರಲೀಕೃಷ್ಣ ರಾವ್, ಬಿ. ಕೃಷ್ಣಮೂರ್ತಿ ರಾವ್ ಹಾಗೂ ಕಾರ್ಯದರ್ಶಿ ಪಟ್ಟಾಭಿರಾಮ ಎನ್.ಎಸ್. ಉಪಸ್ಥಿತರಿದ್ದರು.

**ಸಂಪಾದಕ ಮಂಡಳಿ**

ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ್ ರಾವ್
ಡಾ। ವೈ. ಸುದರ್ಶನ ರಾವ್
ಟಿ. ಸುರೇಶ್ ರಾವ್, ನಿಟ್ಟೂರು
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ, ಮಣಿಪಾಲ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ. -ಸಂಪಾದಕ ಮಂಡಳಿ

## ಚಿಂತನ

ಆಡಳಿತಾರೂಢ ಪಕ್ಷದ ಸರಕಾರ ಮಾಡಿದ ಯಾವುದೇ ಕಾಯ್ದೆ ಕಾನೂನುಗಳನ್ನು ಅದು ಒಳ್ಳೆಯದಿರಲಿ ಕೆಟ್ಟದ್ದಿರಲಿ ಖಂಡಿಸುವುದು _ಟೀಕಿಸುವುದು ವಿರೋಧ ಪಕ್ಷಗಳು ಮಾಡುವ ಸಾಮಾನ್ಯ ಕೆಲಸ. ಇದು ನಮ್ಮ ದೇಶದಲ್ಲಿ ಮಾತ್ರಾ. ಬೇರೆ ದೇಶದಲ್ಲಿ ಹೀಗೆ ಇಲ್ಲ. ಉದಾಹರಣೆಗೆ - ಇತ್ತೀಚೆಗೆ ಅಮೇರಿಕಾದ ಒಬಾಮಾ ಸರಕಾರ ಸಿರಿಯಾ ದೇಶದ ಮೇಲೆ ಯುದ್ಧ ಸಾರಬೇಕೆಂಬ ನಿರ್ಣಯಕ್ಕೆ ಒಬಾಮಾ ಪಕ್ಷದ ಕೆಲ ಸಂಸದರು ಸಂಸತ್ತಿನಲ್ಲಿ ವಿರೋಧ ವ್ಯಕ್ತ ಪಡಿಸಿದ್ದು ಎಲ್ಲರಿಗೂ ತಿಳಿದದ್ದೇ ಆಗಿದೆ.

ಶಾಸಕರಿಗೆ-ಸಂಸದರಿಗೆ (ರಾಜಕಾರಣಿಗಳಿಗೆ) ಆರ್ಥಿಕವಾಗಿ ಲಾಭವಾಗುವ ವಿಚಾರ ಶಾಸನ ಸಭೆಗಳಲ್ಲಿ- ಸಂಸತ್ತಿನಲ್ಲಿ ಯಾವುದೇ ವಿರೋಧವಿಲ್ಲದೆ ಸರ್ವಾನುಮತದಲ್ಲಿ ಅಂಗೀಕಾರವಾಗುವುದು ಸರಿ ತಾನೆ?

ಕ್ರಿಮಿನಲ್ ಪ್ರಕರಣಗಳಲ್ಲಿ ದೋಷಿ ಎಂದು ಎರಡು ಅಥವಾ ಅದಕ್ಕಿಂತ ಹೆಚ್ಚು ವರ್ಷ ಸೆರೆವಾಸ ಶಿಕ್ಷೆ ಜ್ಯಾರಿಯಾದ ಕ್ಷಣದಿಂದಲೇ ಆತನು/ಆಕೆಯು ತನ್ನ ಶಾಸನ ಸಭಾ ಸದಸ್ಯತ್ವವನ್ನು ಕಳೆದುಕೊಳ್ಳುತ್ತಾನೆ/ಳೆ ಎಂಬ ಕಳೆದ ಜುಲೈ ತಿಂಗಳಲ್ಲಿ ಸರ್ವೋಚ್ಚನ್ಯಾಯಾಲಯ ನೀಡಿದ ತೀರ್ಪು ರಾಜಕಾರಣಿಗಳ ನೈತಿಕ ಮಟ್ಟ ತಿಳಿಯಲು ಹಿಡಿದ ಕನ್ನಡಿ. ನಮ್ಮ ದೇಶದಾದ್ಯಂತ ಸಂಸದರಾಗಲಿ ಶಾಸಕರಾಗಲಿ ಇಂತಹ ಕ್ರಿಮಿನಲ್ ಅಪರಾಧದಲ್ಲಿ ಸಿಕ್ಕಿ ಹಾಕಿಕೊಂಡಿರುವುದು - ಶಿಕ್ಷೆ ಅನುಭವಿಸಿರುವುದು ಎಲ್ಲರಿಗೂ ತಿಳಿದ ವಿಚಾರ. ಅದಕ್ಕಾಗಿಯೇ ಸರಕಾರವು ಸುಗ್ರೀವಾಜ್ಞೆಯ ಮೂಲಕ ಈ ತೀರ್ಪನ್ನು ರದ್ದುಗೊಳಿಸುವಂತಹ ಕಾನೂನನ್ನು ಸಂಸತ್ತಿನಲ್ಲಿ ಮಂಡಿಸಿದಾಗ ಯಾವೊಬ್ಬ ಸಂಸದನೂ ಅದನ್ನು ವಿರೋಧಿಸದೆ ಅದು ಜ್ಯಾರಿಯಾಗುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ನಂತರ ಪಕ್ಷದ ನಾಯಕರೊಬ್ಬರ ವಿರೋಧಕ್ಕೆ ಮಣಿದು ಸರಕಾರದ ಸುಗ್ರೀವಾಜ್ಞೆಯನ್ನು ಹಿಂದಕ್ಕೆ ಪಡೆದದ್ದೂ ತಿಳಿದ ವಿಚಾರ.

ಭಾರತೀಯ ಸಮಾಜದಲ್ಲಿ ಅದರಲ್ಲಿಯೂ ರಾಜಕೀಯ ಕ್ಷೇತ್ರವು ಭ್ರಷ್ಟಾಚಾರ, ಅನೈತಿಕತೆ, ಕ್ರಿಮಿನಲ್ ಚಟುವಟಿಕೆಗಳಿಂದ ವ್ಯಸ್ಥಗೊಂಡಿರುವಾಗ ಅದನ್ನು ಸ್ವಚ್ಛಗೊಳಿಸುವ ಉತ್ತಮಪಡಿಸುವ ನ್ಯಾಯಾಂಗದ ಈ ತೀರ್ಪನ್ನು ಹೀಗೆ ವಿರೋಧಿಸಿ ಸುಗ್ರೀವಾಜ್ಞೆ ಮೂಲಕ ರದ್ದುಗೊಳಿಸಿರುವುದು, ಅದಕ್ಕೆ ಎಲ್ಲಾ ಪಕ್ಷಗಳೂ ಕೈ ಜೋಡಿಸಿರುವುದೂ ನಮ್ಮ ದೇಶದ ದುರಂತವಲ್ಲದೆ, ದೇಶದ ಭವಿಷ್ಯದ ಮುನ್ನಡೆಯ ಬಗ್ಗೆ ಯೋಚಿಸುವಂತಾಗಿದೆಯಲ್ಲವೇ?

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀ (ಪೂರ್ವಾಶ್ರಮದಲ್ಲಿ ಕೆ. ಆತ್ಮಾರಾಮ ಶಾಸ್ತ್ರೀ, ಬೆಂಗಳೂರು)

(ಹಿಂದಿನ ಸಂಚಿಕೆಯಿಂದ...)

"ಭಗವಾನ್, ಭೂದೇವಿಯ ಅಳಲನ್ನು ಕೇಳಿ ನಾವೆಲ್ಲ ಬಂದು ಭೂ ಭಾರವನ್ನು ಇಳಿಸುವ ಸಲುವಾಗಿ ಅವತರಿಸುವಂತೆ ಕೇಳಿಕೊಂಡವು. ಪರಮಾತ್ಮನೇ, ನಮ್ಮ ಪ್ರಾರ್ಥನೆಯನ್ನು ಮನ್ನಿಸಿ ಭೂಮಿಯ ಮೇಲೆ ಶ್ರೀಕೃಷ್ಣನಾಗಿ ಅವತರಿಸಿದೆ. ದುಷ್ಟರನ್ನು ಸಂಹರಿಸಿ ಶಿಷ್ಟರನ್ನು ನೆಲೆಗೊಳಿಸಿರುವೆ. ಅಧರ್ಮವನ್ನು ನಾಶಮಾಡಿ ಧರ್ಮವನ್ನು ಸಂಸ್ಥಾಪಿಸಿರುವೆ. ನಿನ್ನ ಅವತಾರದ ಉದ್ದೇಶ ಈಡೇರಿದೆ. ಇನ್ನು ಈ ಅವತಾರವನ್ನು ಸಮಾಪ್ತಿಗೊಳಿಸಿ ನಿನ್ನ ಪರಂಧಾಮಕ್ಕೆ ಹಿಂದಿರುಗಬಹುದಲ್ಲಾ? ಎಲ್ಲರೂ ನಿನ್ನ ಆಗಮನವನ್ನು ಪ್ರತೀಕ್ಷಿಸುತ್ತಿರುವರು."

ಭಗವಂತನೆಂದನು, "ವಿಬುಧೇಶ್ವರನೇ, ನಾನೂ ನಿಮ್ಮಂತೆ ಯೋಚಿಸುತ್ತಿದ್ದೇನೆ. ನೀವು ವಹಿಸಿದ ಕಾರ್ಯವನ್ನು ಸಾಧಿಸಿದ್ದೇನೆ. ಭೂಮಿಯ ಭಾರವನ್ನು ಇಳಿಸಿದ್ದೇನೆ. ಈಗ ಯಾದವ ಕುಲವೂ ವೀರ್ಯ, ಶೌರ್ಯ ಐಶ್ವರ್ಯಗಳಿಂದ ಉದ್ಧೃತವಾಗಿದೆ. ಇಡೀ ಜಗತ್ತನ್ನು ನುಂಗಬೇಕೆಂದಿರುವ ಇದನ್ನು ಸಮುದ್ರವನ್ನು ದಡವು ತಡೆಹಿಡಿಯುವಂತೆ ತಡೆಹಿಡಿದಿದ್ದೇನೆ. ಇದನ್ನು ನಾಶ ಮಾಡದೆ ಬಂದು ಬಿಟ್ಟರೆ ಇದು ಇಡಿ ಲೋಕವನ್ನೇ ನಾಶಮಾಡೀತು. ಈಗ ಬ್ರಹ್ಮಶಾಪದಿಂದ ಇದರ ಅಂತ್ಯ ಆರಂಭವಾಗಿದೆ. ಇದು ಪೂರ್ತಿ ನಾಶವಾದ ಮೇಲೆ ನಾನು ನನ್ನ ಧಾಮವನ್ನು ಬಂದು ಸೇರಿಕೊಳ್ಳುತ್ತೇನೆ". ಹೀಗೆ ಲೋಕನಾಥನು ತನ್ನ ಸಂಕಲ್ಪವನ್ನು ತಿಳಿಸಿದ ಮೇಲೆ ಬ್ರಹ್ಮಾದಿ ದೇವತೆಗಳು ಅವನಿಗೆ ನಮಸ್ಕರಿಸಿ ತಂತಮ್ಮ ಸ್ಥಾನಗಳಿಗೆ ತೆರಳಿದರು.

ದ್ವಾರಕೆಯಲ್ಲಿ ಉತ್ಪಾತಗಳು ಕಾಣಿಸಿಕೊಂಡವು. ಆಗ ಗಾಬರಿಗೊಂಡು ತನ್ನನ್ನು ನೋಡಲು ಬಂದ ಯದುಕುಲದ ಕೆಲವೃದ್ಧರನ್ನು ಕುರಿತು ಭಗವಂತನು ಹೀಗೆಂದನು, "ಪೂಜ್ಯರೇ, ಈಗ ಈ ದ್ವಾರಕೆಯಲ್ಲಿ, ದೊಡ್ಡ ದೊಡ್ಡ ಉತ್ಪಾತಗಳು ಕಾಣಿಸಿಕೊಳ್ಳುತ್ತಿವೆ. ನಮ್ಮ ಕುಲಕ್ಕೆ ಪ್ರತೀಕಾರವಿಲ್ಲದ ಬ್ರಹ್ಮ ಶಾಪವು ಅಂಟಿಬಿಟ್ಟದೆ. ನಾವೆಲ್ಲ ಬದುಕಿರಲು ಇಷ್ಟ ಪಡುವುದಾದರೆ ನಾವು ದ್ವಾರಕೆಯಲ್ಲಿ ವಾಸಿಸಬಾರದು. ನಾವಿಂದೇ ಪ್ರಭಾಸಕ್ಷೇತ್ರಕ್ಕೆ ಹೋಗಿಬಿಡೋಣ, ದಕ್ಷನ ಶಾಪದಿಂದ ಕ್ಷಯರೋಗಕ್ಕೆ ತುತ್ತಾದ ಚಂದ್ರನು ಅಲ್ಲಿ ಸ್ನಾನ ಮಾಡಿ ರೋಗ ಮುಕ್ತನಾಗಿದ್ದಾನೆ. ಪುನಃ ಕಲೆಗಳ ವೃದ್ಧಿಯನ್ನು ಪಡೆದುಕೊಂಡಿದ್ದಾನೆ. ನಾವೂ ಆ ತೀರ್ಥದಲ್ಲಿ ಸ್ನಾನ ಮಾಡಿ ಪಿತೃಗಳಿಗೆ, ದೇವತೆಗಳಿಗೆ ತರ್ಪಣ ಕೊಟ್ಟು ಬ್ರಾಹ್ಮಣರನ್ನು ವಿವಿಧ ಪಕ್ವಾನ್ನಗಳಿಂದ ತೃಪ್ತಿ ಪಡಿಸೋಣ. ಸತ್ಪಾತ್ರರಿಗೆ ದಾನ ಕೊಟ್ಟು ಆದಷ್ಟು ಈ ಪಾಪದಿಂದ ಪಾರಾಗೋಣ".

ಈ ರೀತಿ ಭಗವಂತನ ಆದೇಶದಂತೆ



ಯಾದವರೆಲ್ಲ ಪ್ರಭಾಸಕ್ಷೇತ್ರಕ್ಕೆಹೋಗಲು ಅಣಿಯಾದರು. ಉದ್ಧವನು ಏಕಾಂತದಲ್ಲಿ ಕೃಷ್ಣನನ್ನು ಕಂಡು, ನಮಸ್ಕರಿಸಿ ಇಂತೆಂದನು, "ದೇವಾಧಿದೇವ, ಈ ಯದುವಂಶವನ್ನು ಸಂಹಕರಿಸಬೇಕೆಂದು ನೀನು ನಿಶ್ಚಯಿಸಿರುವೆ. ಅದಕ್ಕೇ ಬ್ರಹ್ಮಶಾಪವನ್ನು ನಿಷ್ಕ್ರಿಯಗೊಳಿಸುವ ಶಕ್ತಿ ನಿನಗಿದ್ದರೂ ನೀನು ಹಾಗೆ ಮಾಡುತ್ತಿಲ್ಲ. ಭಗವಂತ, ಈ ಕಾರ್ಯ ಮುಗಿದ ಮೇಲೆ ಈ ಲೋಕವನ್ನು ಬಿಟ್ಟು ನೀನು ನಿನ್ನ ಪರಮಪದಕ್ಕೆ ಹೋಗುವಿಯೆಂದು ನನಗನಿಸುತ್ತದೆ. ಆದರೆ ಕೇಶವ, ನಿನ್ನ ಚರಣ ಕಮಲಗಳನ್ನು ಒಂದು ಕ್ಷಣವೂ ಬಿಟ್ಟಿರಲು ನನಗೆ ಸಾಧ್ಯವಾಗದು. ಆದುದರಿಂದ ನನ್ನನ್ನೂ ನಿನ್ನ ಸಂಗಡ ಕರೆದುಕೊಂಡು ಹೋಗು".

ಭವಿಷ್ಯದ ವಿರಹವನ್ನು ಊಹಿಸಿಕೊಂಡು ದುಃಖಿತನಾದ, ತನ್ನ ಪ್ರಿಯ ಬಂಧು, ಆಪ್ತಮಿತ್ರ, ಪರಮ ಭಕ್ತನಾದ ಉದ್ಧವನನ್ನು ಅನೇಕ ಉಪಾಖ್ಯಾನಗಳನ್ನು ಹೇಳುವುದರ ಮೂಲಕ ಶ್ರೀಕೃಷ್ಣನು ಸಮಾಧಾನ ಪಡಿಸಿದನು. ಹಾಗೇ ಭಕ್ತಿಯೋಗದ ಮಹಿಮೆಯನ್ನು ಶ್ರುತಪಡಿಸಿದನು. ವಿವಿಧ ವಿದ್ಯೆಗಳ ಪರಿಚಯವನ್ನೂ ಮಾಡಿಕೊಟ್ಟು ಪರಮಾರ್ಥ ತತ್ತ್ವವನ್ನು ನಿರೂಪಿಸಿದನು.


ಶ್ರೀಕೃಷ್ಣನಿಂದ ಅನೇಕಾನೇಕ ಕಠಿನ ಸಾಧನೆಗಳ ವರ್ಣನೆಯನ್ನು ಕೇಳಿ ಉದ್ಧವನೆಂದನು, "ಜನಾರ್ದನ, ನೀನು ಹೇಳಿದ ಸಾಧನೆಗಳನ್ನು ತಿಳಿಯಲು ಮತ್ತು ಆಚರಿಸಲು ಬಲು ಕಠಿನ. ಆದುದರಿಂದ ಸರಳ ವಿಧಾನದ ಸಾಧನೆಯೇನಾದರೂ ಇದ್ದರೆ ತಿಳಿಸುವೆಯಾ?". ಆಗ ಭಗವಂತನು ಅವನಿಗೆ ಭಾಗವತ ಧರ್ಮವನ್ನು ಉಪದೇಶಿಸಿದನು. "ಮಿತ್ರ, ಮನುಷ್ಯನು ಬೇರೆಲ್ಲಾ ಧರ್ಮಗಳನ್ನು ಬಿಟ್ಟು ಏಕಾಗ್ರ ಭಕ್ತಿಯಿಂದ ನನಗೆ ಶರಣಾಗಬೇಕು. ಈ ಮಾಯಾ ಜಗತ್ತಿನ ಪ್ರತಿಯೊಂದು ಕಣದಲ್ಲೂ ನನ್ನನ್ನೇ ಕಾಣಬೇಕು. ಕಾಯೇನ, ವಾಚಾ, ಮನಸಾ ನನ್ನನ್ನೇ ಭಜಿಸಬೇಕು. ನಾನು ಅಂಥವರನ್ನೇ ಪ್ರೀತಿಸುವುದು. ನನ್ನಿಂದಲೇ ಅವರಿಗೆ ಶ್ರೇಯೋಲಾಭವಾಗುವುದು. "ಈ ಉಪದೇಶವನ್ನು ಕೇಳಿದ ಉದ್ಧವನ ಅಜ್ಞಾನ, ಮೋಹ ಮಾಯವಾಯಿತು. ಭಗವಚ್ಚರಣಗಳಲ್ಲಿ ಶಾಶ್ವತ ಭಕ್ತಿಯಿರುವಂತೆ ಬೇಡಿಕೊಂಡನು. ಆಗ ಜಗದೀಶನೆಂದನು "ಉದ್ಧವ, ನೀನು ನನ್ನ ಬದರಿಕಾಶ್ರಮಕ್ಕೆ ಹೋಗು. ಅಲ್ಲಿ ನನ್ನ ಪಾದತೀರ್ಥದಲ್ಲಿ ಸ್ನಾನ ಮಾಡಿ ತೀರ್ಥವನ್ನು ಸೇವಿಸಿ ಶುಚಿಯಾಗು. ಅಲಕಾನಂದೆಯನ್ನು ನೋಡಿ ಪಾಪ ವೃಂದವನ್ನು ತೊಳೆದು ಕೋ,ಕಳೆದುಕೋ. ನಾರುಡೆಯನ್ನುಟ್ಟು, ವನ್ಯ ಭೋಜಿಯಾಗಿ ಸುಖನಿಸ್ಪೃಹನಾಗಿರು. ಕ್ರಮೇಣ ಗುಣಾತೀತನಾಗಿ ನನ್ನ ಪದವನ್ನು ಸೇರು.

ಉದ್ಧವನು ಭಕ್ತ್ಯುತ್ಕರ್ಷೆಯಿಂದ ಕಣ್ಣೀರಿನಿಂದ ಭಗವಂತನ ಪಾದಗಳನ್ನು ತೊಳೆದನು. ಮತ್ತೆ ಮತ್ತೆ ಪರಮಾತ್ಮನ ಪಾದ ಸ್ಪರ್ಶ ಮಾಡಿ ನಮಸ್ಕರಿಸಿದನು. ಕೊನೆಗೆ ನಿರ್ಮೋಹಿಯಾಗಿ ಬದರಿಕಾಶ್ರಮದ ಕಡೆಗೆ ನಡೆದನು.

(ಮುಂದುವರಿಯುವುದು)

# ಶ್ರೀ ಶಾರದಾ ವೇದಿಕೆಯ ಮಹಾ ಪೋಷಕರಾಗಿ ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ

ಉಡುಪಿ ಕಕ್ಕುಂಜೆಯಲ್ಲಿ ವಾಸ್ತವ್ಯದಲ್ಲಿರುವ ಶ್ರೀಮತಿ ಸವಿತಾ ಮೋಹನ್‌ರಾವ್ ಶ್ರೀ ಶಾರದಾ ವೇದಿಕೆಯ ಮಹಾಪೋಷಕರಾಗಿ ಸಹಕಾರ ನೀಡಿದ್ದಾರೆ. ಆರ್ಮಿ ಆರ್ಡಿನೆನ್ಸ್ ಕೋರ್ಸ್ (Army Ordinance Corps)ನಲ್ಲಿ ಉದ್ಯೋಗದಲ್ಲಿದ್ದು 1976ರಲ್ಲಿ ಸ್ವಯಂ ನಿವೃತ್ತಿಯನ್ನು ಪಡೆದು ಕೇಂದ್ರ ಅಬಕಾರಿ ಮತ್ತು ಸುಂಕ ಇಲಾಖೆಯಲ್ಲಿ ಅಧೀಕ್ಷಕರಾಗಿ ಬಡ್ತಿ ಪಡೆದು 2006ರಲ್ಲಿ ನಿವೃತ್ತರಾದ ಶ್ರೀ ಮಾಂಟ್ರಾಡಿ ಮೋಹನ ರಾಯರ (ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ನಿರ್ದೇಶಕರು) ಧರ್ಮಪತ್ನಿ ಯಾಗಿರುವ ಶ್ರೀಮತಿ ಸವಿತಾ ಮೋಹನ್‌ರಾಯರು ಉಡುಪಿಯ ಒಳಕಾಡಿನ ದಿ।ರಂಗರಾವ್ (ಸೈಕಲ್ ರಂಗರಾಯರೆಂದೇ ಪ್ರಖ್ಯಾತಿ)ಹಾಗೂ ದಿ।ಗಿರಿಜಾ ಬಾಯಿ ದಂಪತಿಗಳ ಕೊನೆಯ



ಪುತ್ರಿ. ಶ್ರೀಮತಿ ಸವಿತಾರವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಉಡುಪಿಯ ಒಳಕಾಡಿನ ಸೌತ್ ಶಾಲೆಯಲ್ಲಿಯೂ ನಂತರ ಬಿಎಸ್ಸಿ ಪದವಿಯವರೆಗೆ ಉಡುಪಿಯ ಪೂರ್ಣಪ್ರಜ್ಞಾ ಕಾಲೇಜಿನಲ್ಲಿಯೂ ಓದಿದ್ದಾರೆ. ಅಲ್ಲದೇ ಉಡುಪಿಯ ಟಿ ಎಂ ಎ ಪೈ ಕಾಲೇಜ್ ಆಫ್ ಎಜ್ಯುಕೇಶನ್‌ನಲ್ಲಿ ಬಿಎಡ್ ಪದವಿ ಗಳಿಸಿದರು. 1972ರಲ್ಲಿ ಪೆರ್ಡೂರು ಸರಕಾರಿ ಹೈಸ್ಕೂಲಿನಲ್ಲಿ ಅಧ್ಯಾಪಕಿಯಾಗಿ ವೃತ್ತಿ ಜೀವನ ಪ್ರಾರಂಭಿಸಿ, ಉಡುಪಿ ಕಡಿಯಾಳಿಯ ಕಮಲಾ ಬ್ಯಾ ಹೈಸ್ಕೂಲಿನಲ್ಲಿ ವೃತ್ತಿಯನ್ನು ಮುಂದುವರಿಸಿ, 2008ರಲ್ಲಿ ವೃತ್ತಿಯಿಂದ ನಿವೃತ್ತರಾದರು. ಶ್ರೀಮತಿ ಸವಿತಾ ಮೋಹನ ರಾವ್ ದಂಪತಿಗಳ ಇಬ್ಬರು ಹೆಣ್ಣು ಮಕ್ಕಳು (ಡಾ। ಪ್ರಶಾಂತಿ ಹಾಗೂ ಪ್ರಥ್ವಿ) ಇಬ್ಬರೂ ಮದುವೆಯಾಗಿ ಬೆಂಗಳೂರಿನಲ್ಲಿ ತಮ್ಮ ಸಂಸಾರದೊಂದಿಗೆ ವಾಸ್ತವ್ಯದಲ್ಲಿದ್ದಾರೆ. ಶ್ರೀಮತಿ ಸವಿತಾ ಮೋಹನ್‌ರಾವ್ ಶ್ರೀ ಶಾರದಾ ವೇದಿಕೆಗೆ ನೀಡಿರುವ ಈ ಕೊಡುಗೆಯನ್ನು ಕೃತಜ್ಞತೆಗಳೊಂದಿಗೆ ಸ್ವೀಕರಿಸಿ, ಅವರಿಗೆ ಹಾಗೂ ಅವರ ಮನೆಯವರಿಗೆ ಅನಂತ ಶ್ರೇಯಸ್ಸು ಉಂಟಾಗಲಿ ಎಂದು ಶ್ರೀ ಶಾರದಾ ಬಳಗವು ಶ್ರೀ ಶಾರದಾ ಮಾತೆಯಲ್ಲಿ ಪ್ರಾರ್ಥಿಸುತ್ತದೆ.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಳಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ವಿ. ಕೃಷ್ಣಮೂರ್ತಿ ರಾವ್ ಆಳುಗೇಲು, ಶ್ರೀಮತಿ ಸರೋಜಿನಿ ದೇವೆರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಆದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್ ರಾವ್ ಕಬ್ಯಾಡಿ

## ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.)

76 ಬಡಗಬೆಟ್ಟು, ಕುಕ್ಕಿಕಟ್ಟೆ, ಉಡುಪಿ-576101

**ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ**

2013-14ನೇ ಸಾಲಿನ ದಿ। ಡಾ.ವೈ.ಚಂದ್ರಶೇಖರರಾವ್ ಸ್ಮಾರಕ ವಿದ್ಯಾರ್ಥಿವೇತನಕ್ಕಾಗಿ ಪ್ರತಿಭಾನ್ವಿತ ಹಾಗೂ ಆರ್ಥಿಕ ಸಹಾಯ ಅಗತ್ಯವಿರುವ ತಾಂತ್ರಿಕ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಕೈಬರಹದ ಅರ್ಜಿಯಲ್ಲಿ ತಮ್ಮ ವಿವರಗಳೊಂದಿಗೆ ಆದಾಯ ಹಾಗೂ ವ್ಯಾಸಂಗ ದೃಢಪತ್ರಿಕೆಗಳನ್ನು ಲಗತ್ತಿಸಿರಬೇಕು. ತಂದೆ-ತಾಯಿಯರ ವೃತ್ತಿ, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು (ಪಾಸ್ ಬುಕ್ಕಿನ ಮೊದಲ ಹಾಳೆಯ ಪ್ರತಿ) ಅರ್ಜಿಯಲ್ಲಿ ನಮೂದಿಸಿರಬೇಕು. ಕ್ರಮಬದ್ಧವಾಗಿ ಬರೆದ ಅರ್ಜಿಗಳನ್ನು ಮಾತ್ರ ಗಮನಿಸಲಾಗುವುದು. ಅರ್ಜಿ ಕಳುಹಿಸಲು ಕೊನೆಯ ದಿನಾಂಕ 31-10-2013. ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**ಡಾ। ವೈ.ಸುದರ್ಶನರಾವ್**

**ಕೆನರಾಹೆಲ್ತ್‌ಸೆಂಟರ್ ,ಅಂಜುಮಾನ್ ರಸ್ತೆ, ಸಿಟಿಬಸ್ಸ್ಟ್ಯಾಂಡ್ ಬಳಿ, ಉಡುಪಿ-576101**



## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.22-10-2013) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.24-10-2013 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.07-11-2013 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**



## ವೈದಿಕ ಶಿಬಿರ

**ತಾ.16-10-2013ರಿಂದ 23-10-2013ರ ವರೆಗೆ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಮಕ್ಕಳ ವೈದಿಕ ಶಿಬಿರವು ನೆರವೇರಲಿದೆ. ಶಿಬಿರದಲ್ಲಿ ಉಪನ್ಯಾಸದ ನಿಮಿತ್ತ ವೈದಿಕ ಅರ್ಚಕರು ಭಾಗವಹಿಸಲಿದ್ದಾರೆ. ಹಾಗೆಯೇ ಪ್ರತಿ ದಿನ ಬೆಳಿಗ್ಗೆ 5-30ಯಿಂದ 7-00 ಗಂಟೆಯ ವರೆಗೆ ಉಚಿತ ಪ್ರಾಣಯೋಗ ಶಿಬಿರವು ನಡೆಯಲಿದೆ. ಶಿಬಿರಾರ್ಥಿಗಳು ಹಾಗೂ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಶಿಬಿರವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.**

**ಸೂಚನೆ:**
1. ಶಿಬಿರಾರ್ಥಿಗಳಿಗೆ ಊಟೋಪಚಾರ, ಉಳಿದುಕೊಳ್ಳಲು ವ್ಯವಸ್ಥೆ ಇದೆ.
2. ಶಿಬಿರಾರ್ಥಿಗಳು ಕೌಳಿಗೆ ಸೌಟು, ಹರಿವಾಣ ಮತ್ತು ದಿನನಿತ್ಯದ ವಸ್ತುಗಳನ್ನು ತರತಕ್ಕದ್ದು.
3. ಜಪ ಮತ್ತು ಪೂಜಾ ವಿಧಾನ ಕಲಿಯಬಯಸುವ ದೊಡ್ಡವರಿಗೂ ಅವಕಾಶವಿದೆ.
4. ಯೋಗ ಶಿಬಿರಕ್ಕೆ ಪುರುಷರು ಹಾಗೂ ಮಹಿಳೆಯರಿಗೂ ಅವಕಾಶವಿದೆ.

**ಮಾಹಿತಿಗಾಗಿ ಸಂಪರ್ಕ :**

**ಕೃಷ್ಣರಾಜ ಭಟ್ (9980195355), ಸುಧಾಕರ ಬೆಳ್ಳೆ (9845193103)**

**ಕಾರ್ಯಕ್ರಮದ ಪ್ರಾಯೋಜಕರು : ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಮಹಿಳಾವೇದಿಕೆ, ಪಡುಬಿದ್ರಿ ಮತ್ತು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಆಡಳಿತ ಮಂಡಳಿ, ಪಾದೆಬೆಟ್ಟು**





ಎಮ್. ದೇವಾನಂದ್ ಭಟ್  
Cell : 9845644556  
9483913344

ಶೋಭಾ ಡಿಜಿಟಲ್  
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)  
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655  
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



**Buying and selling shares as easy as checking your emails**

**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**  
**Tel : 0824 2412903, 9448191028**  
**Navadurga Share Services**  
**Email : navdurga@bp.sharekhan.com**

Sharekhan  
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)


# ಕದ್ರಿ ನೃತ್ಯಾಲಯದ ಶಾರದಾ ಮಹೋತ್ಸವ

ದಿ। ಯು ಎಸ್ ಕೃಷ್ಣರಾವ್ ಅವರ 99ನೇ ವರ್ಷದ ಸಂಸ್ಮರಣೆಯಾಗಿ ತಾ.13-10-2013ರಂದು ಮಂಗಳೂರು ಕದ್ರಿಯ ನೃತ್ಯ ವಿದ್ಯಾನಿಲಯ ಸಭಾಂಗಣದಲ್ಲಿ ಶ್ರೀಮತಿ ಉಷಾ ಪ್ರವೀಣ್ ಇವರ ಶಿಷ್ಯ ವೃಂದದವರಿಂದ ಶಾಸ್ತ್ರೀಯ ಸಂಗೀತ ಹಾಗೂ ನಾಟ್ಯವಿಶಾರದ ವಿದ್ವಾನ್ ಯು. ಕೆ. ಪ್ರವೀಣ್ ಇವರ ಶಿಷ್ಯ ವೃಂದದವರಿಂದ ನೃತ್ಯ ವೈವಿಧ್ಯ ಕಾರ್ಯಕ್ರಮವು ನೆರವೇರಿತು . ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ನಡೆದ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಂಗಳೂರು ಕದ್ರಿ ಪೂರ್ವಪೊಲೀಸ್ ಠಾಣಾ ಇನ್ಸ್‌ಪೆಕ್ಟರ್ ಶ್ರೀ ರಾಘವ ಎಸ್ ಪಡೀಲ್ ನಿರ್ವಹಿಸಿದ್ದರು. ಕದ್ರಿ ಕಾರ್ಪೊರೇಟರ್ ಶ್ರೀ ಅಶೋಕ್ ಕುಮಾರ್ ಡಿ.ಕೆ. ಮುಖ್ಯ ಅತಿಥಿಗಳಾಗಿದ್ದರು.

# ಸಾವಿತ್ರಿ ಮನೋಹರ್‌ಗೆ ಸನ್ಮಾನ

ಉಡುಪಿ- ದಕ್ಷಿಣಕನ್ನಡ- ಕಾಸರಗೋಡು ಜಿಲ್ಲೆಗಳನ್ನೊಳಗೊಂಡ "ಸಾಹಿತ್ಯ ಸಂಗಮ"ದ ಅಧ್ಯಕ್ಷರಾಗಿದ್ದು, ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಕ್ಕಳಲ್ಲಿ ಸಾಹಿತ್ಯಾಭಿರುಚಿ ಮೂಡಿಸಿದ್ದಲ್ಲದೆ ಮಕ್ಕಳಿಗಾಗಿ ಹಲವು ಕೃತಿಗಳನ್ನು ರಚಿಸಿರುವ ಕಾರ್ಕಳದ ಶ್ರೀಮತಿ ಸಾವಿತ್ರಿ ಮನೋಹರ್ ಅವರನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಶ್ರೀ ಹರಿಕೃಷ್ಣ ಪುನರೂರು ಅವರು ಸನ್ಮಾನಿಸಿದರು.

# ಕಾರ್ಕಳದಲ್ಲಿ ಮಹಾಸಭೆ




ಕಾರ್ಕಳ ಶಂಕರ ಪ್ರತಿಷ್ಠಾನದ ಸರ್ವಸದಸ್ಯರ ಸಭೆಯನ್ನು ಇತ್ತೀಚೆಗೆ ಶ್ರೀ ವಿಶ್ವೇಶ್ವರ ದೇವಸ್ಥಾನದಲ್ಲಿ ಶ್ರೀ ಯಾಜಿ ಎಚ್ ನಿರಂಜನ್ ಭಟ್ ಪಾವಂಜೆ ಇವರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾದ ಶ್ರೀಮತಿ ಪರಮೇಶ್ವರೀ ಲೋಕನಾಥ ಲೋಕೇಶ್ವರ್ ಮಂಗಳೂರು ಹಾಗೂ ಶ್ರೀ ಸಿ.ಎಸ್. ರಾವ್ ಉಡುಪಿ ಸಮಾಜ ಬಾಂಧವರನ್ನುದ್ದೇಶಿಸಿ ಸಂಘಟನೆಯ ಮಹತ್ವವನ್ನು ತಿಳಿಸಿದರು.2012-13ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ 90% ಅಂಕ ಪಡೆದ ವಿದ್ಯಾರ್ಥಿಗಳಿಗೆ ನಗದು ಬಹುಮಾನದೊಂದಿಗೆ ಪ್ರಶಸ್ತಿ ಪತ್ರ ನೀಡಿ ಪುರಸ್ಕರಿಸಲಾಯಿತು. ನಂತರ ಶ್ರೀಮತಿ ಶಾರದಾ ಹಾಗೂ ಶ್ರೀ ಶ್ರೀನಿವಾಸರಾವ್ ದಂಪತಿಗಳು, ಛಾಯಾಗ್ರಾಹಕ ಕೆ.ಹರಿಶ್ಚಂದ್ರರಾವ್,ಶ್ರೀ ಕಾಂತಾವರ ಪ್ರಭಾಕರರಾವ್ ಮೊದಲಾದ ಗಣ್ಯರನ್ನು ಸನ್ಮಾನಿಸಲಾಯಿತು.

ಶ್ರೀ ಮುರಳೀಧರ ಶರ್ಮರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಸೌಮ್ಯ ಭವಾನಿಶಂಕರರಾವ್ ಧನ್ಯವಾದ ಸಲ್ಲಿಸಿದರು. ಕರ್ವಾಲು ಸತೀಶ್‌ರಾವ್ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಕೊನೆಯಲ್ಲಿ ಯುವ ಪ್ರತಿಭೆಗಳಿಂದ ಮನರಂಜನಾ ಕಾರ್ಯಕ್ರಮ ಗಳು ನಡೆದವು.

# ಕನ್ನಡ ಕವಿಕಾವ್ಯ ಪರಿಚಯ-೯ : ಕವಿ ಚಕ್ರವರ್ತಿ ರನ್ನ

- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.



(ಕಳೆದ ಸಂಚಿಕೆಯಿಂದ)

ಮನೆತನದ ಪರಂಪರೆಯಲ್ಲಿ ನಡೆದು ಬಂದಿದ್ದ ಬಳೆ ಮಾರುವ ವೃತ್ತಿಯನ್ನು ಸ್ವೀಕರಿಸದೆ, ಕಾಗೆಯ ಗೂಡಿನಲ್ಲಿ ಹುಟ್ಟಿ ಬೆಳೆದು, ದೊಡ್ಡದಾಗಿ ರೆಕ್ಕೆ ಪುಕ್ಕ ಬಲಿತ ನಂತರ ಹೊರಕ್ಕೆ ಹಾರಿ ತನ್ನವರ ಗುಂಪನ್ನು ಸೇರಿಕೊಳ್ಳುವ ಕೋಗಿಲೆಯಂತೆ ಕವಿ ರನ್ನನು ಚಾಲುಕ್ಯ ಚಕ್ರವರ್ತಿಯಾಗಿದ್ದ ಸತ್ಯಾಶ್ರಯ ಇರಿವಬೆಡಂಗನ ಆಶ್ರಯದಲ್ಲಿದ್ದು, ಒಡೆಯನನ್ನು ಮಹಾಭಾರತದ ಭೀಮಸೇನನಿಗೆ ಹೋಲಿಸಿ ಸಾಹಸ 'ಭೀಮ ವಿಜಯ' ಅಥವಾ 'ಗದಾಯುದ್ಧ' ವೆಂಬ ಗ್ರಂಥವನ್ನು ಬರೆದನು. ಇರಿವ ಬೆಡಂಗನಿಗೆ ಆ ಕಾಲದಲ್ಲಿ ಇದ್ದಂತಹ ಬಿರುದುಗಳನ್ನು ಭೀಮನಿಗೆ ಸಮೀಕರಿಸಿ ಬರೆದಿರುವನು. ಈ ಕಾವ್ಯದಲ್ಲಿ ಭೀಮನೇ ಕಥಾ ನಾಯಕ. ಗದಾಯುದ್ಧದ ಕೊನೆಯಲ್ಲಿ ಕೌರವನು ತೊಡೆ ಮುರಿದು ಪರಂಧಾಮವನ್ನೈದಿದ ಬಳಿಕ ಧರ್ಮರಾಯನು ಭೀಮನನ್ನು ಕುರಿತು ಮಹಾಭಾರತದ ಗೆಲುವಿಗೆ ಕಾರಣೀಭೂತನಾದ ಭೀಮನೇ ಪಟ್ಟಾಭಿಷಿಕ್ತನಾಗಿ ಹಸ್ತಿನಾವತಿಯನ್ನು ಆಳಬೇಕು ಎಂಬ ಬೇಡಿಕೆಯನ್ನು ಮುಂಡಿಸಿದನು. ಆಶೀರ್ವಾದ ಪೂರ್ವಕವಾಗಿ ಇದನ್ನು ಒಪ್ಪಿಕೊಂಡ ಭೀಮನು ದ್ರೌಪದಿಯೊಂದಿಗೆ ಸಿಂಹಾಸನವನ್ನೇರುವನು. ಇದು ರನ್ನನು ತನ್ನ ಕಾವ್ಯದಲ್ಲಿ ಮಾಡಿಕೊಂಡ ಬದಲಾವಣೆ. ತನ್ನ ಆಶ್ರಯದಾತನಾದ ಇರಿವಬೆಡಂಗನನ್ನು ಹೆಚ್ಚು ಮಾಡಿ ತೋರಿಸುವುದಕ್ಕಾಗಿಯೇ ರನ್ನನು ಈ ಬದಲಾವಣೆಯನ್ನು ಮಾಡಿಕೊಂಡಿರಬೇಕು. ಅಲ್ಲಲ್ಲಿ ಮಹಾಭಾರತದ ಪಾತ್ರಗಳ ಬಾಯಿಂದ ಹಿಂದಿನ ಕಥೆಗಳನ್ನು, ಘಟನೆಗಳನ್ನು ಹೇಳಿಸಿ 'ಸಿಂಹಾವಲೋಕನ' ಕ್ರಮದಿಂದ ತನ್ನ 'ಸಾಹಸಭೀಮ ವಿಜಯ'ವನ್ನು ಬರೆದಿರುವನು. ಉದಾಹರಣೆಗೆ-

ಭೀಮನು ಕೌರವನನ್ನು ಕುರಿತು ಅವನು ಹಿಂದೆ ಎಸಗಿದ ಅಪರಾಧ'ಗಳನ್ನು ಜ್ಞಾಪಿಸುವುದು-

*ಜಿತುಗೇಹಾನಲದಾಹದಿಂ ವಿಷವಿಶೇಷಾ*
*ಲಿಪ್ತ ಗುಪ್ತಾನ್ನದಿಂ।*
*ಕೃತಕ ದ್ಯುತವಿನೋದದಿಂ ದ್ರುಪದಜಾ*
*ಕೇಶಾಂಬದಾಕೃಷ್ಟಿಯಿಂ।*
*ಧೃತರಾಷ್ಟ್ರಾತ್ಮಜ! ಪಾಂಡುರಾಜಸುತರಂ*
*ಮುನ್ನಂಕೊಲಲ್ ಕೋರಿದೈ।*
*ಗತಕಾಲಂ ಲಯಕಾಲಮಾಯ್ತು*
*ನಿನಗಾಯ್ತಿನ್ನಂತ್ಯ ಕಾಲಂಗಡಾ।*

ಇವನ ಈ ಕಾವ್ಯಕ್ಕೆ ಭಟ್ಟ ನಾರಾಯಣನ ಸಂಸ್ಕೃತದ ನಾಟಕ 'ವೇಣೀ ಸಂಹಾರ' ಮತ್ತು ಭಾಸಕವಿಯ ಸಂಸ್ಕೃತ 'ಊರುಭಂಗ' ನಾಟಕಗಳು ಪ್ರೇರಣೆಯನ್ನು ನೀಡಿದ್ದುವೆನ್ನಬಹುದು.

ಮಹಾಭಾರತದ ಗದಾಪರ್ವದಲ್ಲಿ ಕಂಡು ಬರುವ ಸನ್ನಿವೇಶವನ್ನು ಕವಿ ಕಣ್ಣಿಗೆ ಕಟ್ಟುವಂತೆ, ಓದುಗರಿಗೆ ಮನಂಬುಗುವಂತೆ ವರ್ಣಿಸಿರುವನು. ತನ್ನವರೆಲ್ಲರನ್ನೂ ಯುದ್ಧದಲ್ಲಿ ಕಳೆದುಕೊಂಡು ದುರ್ಯೋಧನನು ಹದಿನೆಂಟನೆಯ ದಿನ ಅಪರಾಹ್ನ ಇನ್ನುಳಿದ ಅರ್ಧದಿನ ಕಾಲ ತನ್ನ ಪ್ರಾಣವನ್ನು ರಕ್ಷಿಸಿಕೊಳ್ಳಲೋಸುಗ, ಗದಾದಂಡವನ್ನು ಭುಜಾ ದಂಡದಲ್ಲಿ ಅಳವಡಿಸಿಕೊಂಡು ಸಮರಾಭಿಮುಖವಾಗಿ ಸಾಹಸಿಗನಂತೆ ಸಾಗುತ್ತಿರುವ ಸುಯೋಧನನ ಸಾಹಸದ ಸಿರಿಯ ಸೊಬಗನ್ನು ಸವಿಯಲು ಸಾವಿರ ಕಣ್ಣಿದ್ದರೂ ಸಾಲದು, ಹೆಣಗಳ ಬಣವೆಯನ್ನು ಮೆಟ್ಟಿಕೊಂಡು, ಮುರಿದು ಬಿದ್ದರಥ, ರಥಾಂಗ, ಪತಾಕೆ, ಆಯುಧಗಳು ಇತ್ಯಾದಿಗಳ ಬೆಟ್ಟಗಳನ್ನೇ ದಾಟಿ, ಆನೆ, ಕುದುರೆ ಮೊದಲಾದ ಪ್ರಾಣಿಗಳ ಕಳೇಬರಗಳ ರಾಶಿ, ನಡುನಡುವೆ ಹರಿಯುತ್ತಿರುವ ಕೆನ್ನೀರ ಕಾಲುವೆ, ಅಲ್ಲಲ್ಲಿ ಗತಪ್ರಾಣರಾಗಿ ಬಿದ್ದಿರುವ ತನ್ನ ಕಡೆಯ ಮತ್ತು ಪಾಂಡವರ ಕಡೆಯ ವೀರಾಧಿವೀರರ ಶವಗಳು ಇವುಗಳನ್ನೆಲ್ಲಾ ನೋಡುತ್ತಾ ಸಾಗುತ್ತಾನೆ, ರಣರಂಗದಲ್ಲಿ ತಿರುಗಾಡುತ್ತಿರುವ ಪಿಶಾಚಿಗಳು ಇವನನ್ನು ಕಂಡು ಗಹಗಹಿಸಿ ನಕ್ಕು ಕೇಕೆ ಹಾಕುತ್ತಾ ಕುಣಿಯುತ್ತಿದ್ದುವು. ಈ ನಡುವೆ ತನಗೆ ಪ್ರಿಯರಾದ ಸಹೋದರ ದುಶ್ಯಾಸನ, ಪ್ರಾಣಸ್ನೇಹಿತ ಕರ್ಣ, ಗುರುದ್ರೋಣಾಚಾರ್ಯ ಇವರುಗಳ ಕಳೇಬರಗಳನ್ನು ಕಂಡು ಅಲ್ಲಲ್ಲಿ ಕುಳಿತು ದುಃಖಿಸಿ, ಅವರೊಂದಿಗೆ ತಾನು ಕಳೆದಿದ್ದ ದಿನಗಳನ್ನು ಜ್ಞಾಪಿಸಿಕೊಳ್ಳುತ್ತಾ ಮುಂದೆ ಸಾಗುವನು. ವೈರಿ ಪಕ್ಷದಲ್ಲಿದ್ದರೂ, ತಾನು ಏಕಾಂಗಿಯಾಗಿ ಕೊನೆಯ ಉಸಿರಿರುವ ತನಕ ವೀರಾವೇಶದಿಂದ ಕಾದಿ ಮಡಿದ ಅಭಿಮನ್ಯುವಿನ ಕಳೇಬರವನ್ನು ಕಂಡು, ಕಂಬನಿ ಮಿಡಿದು 'ಮಗುವೇ, ನಿನಗೆ ಬಂದಂತಹ ನಿಜ ಸಾಹಸೈಕದೇಶಾ ಮರಣವನಗಕ್ಕೆ' ಎಂದು ಶ್ರದ್ಧಾಂಜಲಿಯನ್ನು ಅರ್ಪಿಸಿ ಮುನ್ನಡೆಯುತ್ತಾನೆ.

(ಮುಂದುವರಿಯುವುದು...)

# "ಸ್ಥಾನಿಕರತ್ನ" ಹರಿದಾಸ ಲಕ್ಷ್ಮೀನಾರ್ಣಪ್ಪಯ್ಯ

ಲೇಖಕರು : ಪಿ.ಶೇಷಪ್ಪಯ್ಯ ಬೈಂದೂರು

ಹಿಂದೂ ಧರ್ಮದ ಆಧಾರ ಸ್ತಂಭಗಳು ವೇದಗಳು ಮತ್ತು ಅವುಗಳಿಗೆ ಪೂರಕವಾಗಿ ಉಪನಿಷತ್ತುಗಳು, ಸ್ಮೃತಿಗಳು ಮತ್ತು ಪುರಾಣಗಳು ಇತ್ಯಾದಿ. ಆದರೆ ಈ ಧಾರ್ಮಿಕ ಗ್ರಂಥಗಳು ಜನಸಾಮಾನ್ಯರ ಗ್ರಹಣ ಸಾಮರ್ಥ್ಯದ ಮಟ್ಟವನ್ನು ಮೀರಿ ನಿಂತಾಗ, ಈ ಧಾರ್ಮಿಕ ರಸಗಂಗೆಯಲ್ಲಿ ಶ್ರೀಸಾಮಾನ್ಯರೂ ಮುಳುಗೆದ್ದು ಪುನೀತರಾಗಲು ಸಾಧ್ಯವಾಗುವಂತೆ ಮಾರ್ಗಸಾಹಿತ್ಯವನ್ನು ಸಾಧುವಾಗಿಸಿದ ಕೀರ್ತಿ ದಾಸವರೇಣ್ಯರಿಗೆ ಸೇರುತ್ತದೆ. ಪಂಡಿತಮಾತ್ರರಿಗೆ ಮೀಸಲಾದ ವಿಷಯಗಳನ್ನು ದಾಸರು ಸರಳವಾದ ಹಾಡುಗಬ್ಬಗಳ ಮೂಲಕ ನಿರೂಪಿಸಿದುದರಿಂದ ದಾಸಸಾಹಿತ್ಯದ ಮೌಲ್ಯವು ಹೆಚ್ಚಿ, ಅದು "ದಾಸೋಪನಿಷತ್ತು" ಎಂಬ ಹಿರಿಮೆಗೆ ಅರ್ಹವಾಯಿತು.

ಪುರಂದರ ದಾಸರು, ಕನಕದಾಸರುಗಳಂತಹ ಶ್ರೇಷ್ಠ ಕೀರ್ತನೆಕಾರರ ಸಾಲಿಗೆ ಸೇರುವ ಯೋಗ್ಯವಂತರಾದರೂ ಕೂಡ, ಎಲೆಮರೆಯ ಕಾಯಿಯಾಗಿಯೇ ಉಳಿದ, ದಕ್ಷಿಣಕನ್ನಡ ಸ್ಥಾನಿಕ ಸಮಾಜದ ಮುಕುಟ ಮಣಿಗಳಲ್ಲೊಬ್ಬರಾದ ಪಾವಂಜೆ ಹರಿದಾಸ ಶ್ರೀ ಲಕ್ಷ್ಮೀನಾರ್ಣಪ್ಪಯ್ಯನವರ ಸಾಧನೆ ಈ ಕ್ಷೇತ್ರದಲ್ಲಿ ಗಮನಾರ್ಹವಾದುದು ಹಾಗೂ ಸ್ಮರಣೀಯವಾದುದು. ಭಕ್ತಿಯ ಹೊಳೆಯಲ್ಲಿ ಮುಳುಗೆದ್ದ ಈ ಮಹಿಮಾನ್ವಿತರು. ಸಮಕಾಲೀನ ಸಮಾಜದ ಸಜ್ಜನ ಸಮುದಾಯಕ್ಕೆ ಅಧ್ಯಾತ್ಮಿಕ ಮಾರ್ಗದರ್ಶನ ಮಾಡಿದವರು ತಮ್ಮ ಅನೇಕ ಕೀರ್ತನೆಗಳು ಮತ್ತು ಹರಿಕಥಾಕಾಲಕ್ಷೇಪಗಳ ಮೂಲಕ ಭಕ್ತಿರಸದ ಹೊನಲನ್ನು ಹರಿಸಿದರು.

ಹರಿದಾಸ ಪಾವಂಜೆ ಶ್ರೀ ಲಕ್ಷ್ಮೀನಾರ್ಣಪ್ಪಯ್ಯನವರು (ಕ್ರಿ.ಶ1854-ಕ್ರಿಶ1924) ಮುಲ್ಕಿ ಬಳಿಯ ಅತ್ತೂರಿನ ಸ್ಥಾನಿಕ ಬ್ರಾಹ್ಮಣರಾದ ಶ್ರೀ ವೆಂಕಟಕೃಷ್ಣಯ್ಯನವರ ಮಗನಾಗಿ ಜನ್ಮವೆತ್ತಿ, ತಮ್ಮ ದೊಡ್ಡಪ್ಪ ಸೀತಾರಾಮಯ್ಯನವರ ದತ್ತು ಪುತ್ರನಾಗಿ ಬೆಳೆದರು. ಎಳವೆಯಲ್ಲಿಯೇ ಎಲ್ಲರಂತಿಲ್ಲದ ಈ ಬಾಲಕ ಲೌಕಿಕ ವಿಷಯಗಳಲ್ಲಿ ಅನಾಸಕ್ತರಾಗಿದ್ದರಿಂದ ಹಿರಿಯರ ಔದಾಸೀನ್ಯಕ್ಕೆ ಈಡಾದರು. ಪಿತೃವಿಯೋಗಾನಂತರ ತಮ್ಮ 10ನೇ ವಯಸ್ಸಿನಲ್ಲೇ ಮನೆ ಹಾಗೂ ಬಂಧುಗಳಿಂದ ದೂರಾದ ಶ್ರೀಯುತರು ಗೌಡಸಾರಸ್ವತ ಸಮಾಜಕ್ಕೆ ಸಮೀಪರಾದರು. ಶ್ರೀ ಕಾಶೀಮಠಾಧೀಶ ಶ್ರೀ ಭುವನೇಂದ್ರ ತೀರ್ಥ ಸ್ವಾಮೀಜಿಯವರ ಕೃಪೆಯ ಮಾಮರವನ್ನೇರಿದ ಭಕ್ತ ಕೋಕಿಲರಾದರು. ಈ ಸ್ವಾಮೀಜಿಯವರ ಭವ್ಯ ದಿವ್ಯ ಸಾನ್ನಿಧ್ಯ ಹಾಗೂ ಧೀರ ಗಂಭೀರ ಧರ್ಮಾಭಿಮಾನಿ ಗೌಡಸಾರಸ್ವತ ಬ್ರಾಹ್ಮಣ ಸಮಾಜದ ಸದಾಶ್ರಯ ಶ್ರೀಲಕ್ಷ್ಮೀನಾರ್ಣಪ್ಪಯ್ಯನವರನ್ನು ಭಗವದ್ಭಕ್ತರನ್ನಾಗಿಯೂ, ಸಮರ್ಥ ಭಕ್ತಕವಿಗಳನ್ನಾಗಿಯೂ ಲೋಕಾನುಭವದಿಂದ ಮಿಂಚುವ ಮಹನೀಯರನ್ನಾಗಿಯೂ ಬೆಳೆಸಿತು. ಈ ಉದಾರತೆಗಾಗಿ ಈ ಸಮಾಜಕ್ಕೆ ನಮ್ಮ ಸಮಾಜದ ಅಭಿನಂದನೆಗಳು ಸಲ್ಲುತ್ತವೆ.

ಹರಿದಾಸರು ಬಳಿಕ ಸಂಸಾರ ಬಂಧನಕ್ಕೆ ಒಳಗಾದರೂ ಮದುವೆ, ಮಡದಿಯ ಮರಣ, ಮರುಮದುವೆ, ಮಗನ ಮರಣಗಳಂತಹ ಆಕಸ್ಮಿಕಗಳ ಹೊಡೆತಕ್ಕೆ ಸಿಕ್ಕಿ ಇವರ ಗೃಹಸ್ಥ ಜೀವನವು ಸುಖದಾಯಕವಾಗಿರಲಿಲ್ಲ.

*ಹರ ತನ್ನ ಭಕುತರನು ತಿರಿವಂತೆ*
*ಮಾಡುವನು*
*ಅರಿದು ನೋಡುವ ಕಬ್ಬಿನ ಕೋಲಿನಂತೆ*
*ಅರೆದುನೋಡುವ ಸುವರ್ಣದ ತುಂಡಿನಂತೆ*

ಎಂಬ ವಚನ ಹರಿದಾಸರ ಬದುಕಿಗೆ ಬಹುನಿಕಟವಾಗಿರುವಂತೆ ಕಾಣಿಸುತ್ತದೆ. ತಮ್ಮ ಬದುಕಿನ ಕೊನೆಗಾಲವನ್ನು ಪಾವಂಜೆಯ ಪುಣ್ಯನೆಲದಲ್ಲಿ ಸವೆಸಿದ ಹರಿದಾಸರು, ಅಂತ್ಯಕಾಲದಲ್ಲಿ ತನ್ನ ದೆನ್ನುದಲ್ಲವನ್ನೂ ಇಲ್ಲಿ ನೆಲೆಸಿದ ಶ್ರೀ ಸುಬ್ರಹ್ಮಣ್ಯ ಸ್ವಾಮಿಗೆ ಸಮರ್ಪಿಸಿದರು. ಹೀಗಾಗಿ ಅವರು ಕೆರೆಯನೀರನು ಕೆರೆಗೆ ಚೆಲ್ಲಿ ಪುನೀತರಾದ ಪರಮ ದಾರ್ಶನಿಕರ ಸಾಲಿನಲ್ಲಿ ವಿಜೃಂಭಿಸುತ್ತಾರೆ. ಇಂತಹ ಮಹನೀಯರನ್ನು ಪಡೆದ ಸ್ಥಾನಿಕ ಬ್ರಾಹ್ಮಣ ಸಮಾಜ ಸಂಪನ್ನವಾದುದೆಂಬ ಮಾತು ನಿರ್ವಿವಾದ.

ಚದುರಿ ಹೋದ ಪಾವಂಜೆ ಹರಿದಾಸ ಶ್ರೀ ಲಕ್ಷ್ಮೀನಾರ್ಣಪ್ಪಯ್ಯನವರ ಕೀರ್ತನಾರತ್ನಗಳನ್ನು ಸಂಗ್ರಹಿಸಿ "ಪಾವಂಜೆ ಹರಿದಾಸವಾಣಿ" ಎಂಬ ಗ್ರಂಥ ರೂಪದಲ್ಲಿ ಹೊರತಂದ "ಸತ್ಸಂಗ ಸೇವಾ ಸಮಿತಿ, ಹಳೆಯಂಗಡಿ ದ.ಕ." ಇವರು ಬಹುಶ್ರೇಷ್ಠವಾದ ಕಾರ್ಯವೊಂದನ್ನು ಮಾಡಿದ ಕೀರ್ತಿಗೆ ಭಾಜನರಾಗಿದ್ದಾರೆ. ಈ ಕೃತಿ ಪ್ರಕಟಣೆ ಸಜ್ಜನರೋರ್ವಂಗೆ ಸಂದ ಗೌರವವಾಗಿದೆ.

"ಪಾವಂಜೆ ಹರಿದಾಸವಾಣಿ" ಎಂಬ ಕೃತಿಯು ಭಕ್ತರಸಭರಿತವಾದ ಅನೇಕ ಶ್ರೇಷ್ಠ ಕೀರ್ತನೆಗಳ ಸಂಗ್ರಹವಾಗಿದೆ. ಇವುಗಳನ್ನು ಕಾಣುವಾಗ ಹರಿದಾಸರು ಭಕ್ತರಾಗಿಯೂ, ಕವಿಗಳಾಗಿಯೂ ವಿಜೃಂಭಿಸಿದ್ದಾರೆಂಬುದು ಕಂಡು ಬರುತ್ತದೆ. ಇಲ್ಲಿಯ ದಾಸರ ಹಾಡುಗಳು ಗಣಪತಿ, ಅಂಬಿಕೆ, ವಿಷ್ಣು, ಸರಸ್ವತಿ, ಆಂಜನೇಯ, ಶಿವ, ಸುಬ್ರಹ್ಮಣ್ಯ ಮೊದಲಾದ ದೇವರುಗಳ ಕುರಿತು ರಚಿಸಿದ್ದಾಗಿವೆ. ಕಾರ್ಕಳದ ಶ್ರೀ ವೆಂಕಟರಮಣ ದೇವರ ಲಕ್ಷದೀಪೋತ್ಸವದ ಸಂದರ್ಭದ ವಿವಿಧ ದಿನಗಳ ವಿವಿಧ ಅಲಂಕಾರಗಳ ವಿವಿಧ ಉತ್ಸವಾಚರಣೆಗಳ ಬಗ್ಗೆ ರಂಭೆ, ಊರ್ವಶಿಯರ ಸಂವಾದ ರೂಪದಲ್ಲಿ ಬರೆದ ಹಾಡುಗಳು ಹೃದಯಂಗಮವಾಗಿವೆ. ಇವು ದೀಪೋತ್ಸವದ ಸಂಭ್ರಮವನ್ನು ಎಳೆಎಳೆಯಾಗಿ ವಿವರಿಸುತ್ತವೆ. ಅದಲ್ಲದೆ ಹರಿದಾಸರಿಗೆ ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಬಗೆಗಿರುವ ಪ್ರೀತ್ಯಾಭಿಮಾನಗಳ ನಿರಂತರ ಸಾಕ್ಷಿಗಳಾಗಿವೆ.

"ಪಾವಂಜೆ ಹರಿದಾಸವಾಣಿ" ಎಂಬ ಶೀರ್ಷಿಕೆಯೊಂದಿಗೆ ಪ್ರಕಟಣೆಗೊಂಡ ಹರಿದಾಸರಕೀರ್ತನೆಗಳ ಸಂಗ್ರಹವಾದ ಪುಸ್ತಕವನ್ನು ಅವಲೋಕಿಸಿದಾಗ, ದಾಸವರೇಣ್ಯರ ಜೀವನದರ್ಶನವೂ ಜೊತೆಯಲ್ಲಿಯೇ ಅವರ ದೈವಭಕ್ತಿಯ ಅಗಾಧತೆಯ ಪರಿಚಯವೂ ನಮಗೆ ಆಗುತ್ತದೆ.

ಮೊತ್ತ ಮೊದಲಿನೆಯದಾಗಿ ವಿಘ್ನನಿವಾರಕನಾದ ಗಣಪತಿಯ ಕುರಿತು ಬರೆದ 15 ಕೀರ್ತನೆಗಳನ್ನು ನಾವು ಕಾಣಬಹುದು. 1ನೇಯ ಪದ್ಯವಾದ "ಅಗ್ರಪೂಜಾ ವಿಘ್ನರಾಜ" 6ನೇಯ ನಂಬಿದೆ ನಿನ್ನ ಗಣೇಶ ಮತ್ತು 7ನೇಯ "ವಾರಣವದನ"ಗಳು ಬಿಗಿಬಂಧ ಮತ್ತು ಭಾವಶ್ರೀಮಂತಿಕೆಗಳಿಂದಾಗಿ ಮನಮುಟ್ಟುತ್ತವೆ. "ವಾರಣ ವದನ" ಕೀರ್ತನೆಯು ಗಣಪತಿಯನ್ನು ಕುರಿತು ಬರೆದ ಪದ್ಯಗಳ ಮುಕುಟಮಣಿಯಂತಿದೆ. ಈ ಹಾಡಿನ ವಿಶಿಷ್ಟತೆಯಿಂದಾಗಿಯೇ ಕೀರ್ತನಕಾರರನ್ನಲ್ಲದೆ ಯಕ್ಷಗಾನ ಭಾಗವತರ ಮನವನ್ನೂ ಗೆದ್ದಿದೆ. ಹಾಗಾಗಿ ಯಕ್ಷಗಾನ ರಂಗ ಪ್ರದರ್ಶನ ಮತ್ತು ತಾಳಮದ್ದಳೆಗಳಲ್ಲಿ ಕಾರ್ಯಕ್ರಮದ ಪ್ರಾರಂಭದಲ್ಲಿ ಗಣಪತಿಸ್ತುತಿಯ ಹಾಡಾಗಿ ಇದನ್ನು ಬಳಸಿಕೊಳ್ಳುತ್ತಿರುವುದು ಇದರ ಮೋಹಕತೆಯ ಮೌಲ್ಯ ನಿರ್ಧಾರಕವಾಗಿದೆ.

16 ರಿಂದ 29 ರವರೆಗಿನ ಕೀರ್ತನೆಗಳು ಸರಸ್ವತಿ ದೇವಿಯ ಪರವಾಗಿದ್ದು ವೀಣಾಪಾಣಿವಾಣಿಯ ವೈವಿಧ್ಯಮಯ ರೂಪ ಗುಣಗಳ ವಿರಾಟ್‌ದರ್ಶನವನ್ನು ಮಾಡಿಸುತ್ತದೆ. ಹರಿದಾಸರ ರಚನೆಗಳಲ್ಲಿ ಪ್ರಾಸವೈಭವವನ್ನು ಇಲ್ಲಿನ ಅನೇಕ ಪದ್ಯಗಳಲ್ಲಿ ಕಾಣಬಹುದಾಗಿದೆ. ಪದ್ಯ 23 ರಲ್ಲಂತೂ ಆದಿಪ್ರಾಸ ಮತ್ತು ಅಂತ್ಯ ಪ್ರಾಸಗಳೆರಡರ ಲಾಸ್ಯವನ್ನು ಗಮನಿಸಬಹುದು.

ಹರಿದಾಸ ಲಕ್ಷ್ಮೀನಾರ್ಣಪ್ಪಯ್ಯನವರ ಕೀರ್ತನೆಗಳ ಆಳ ಹರವುಗಳನ್ನು ಅಳೆಯುವ ಕಾರ್ಯ ಬಹು ದುಸ್ಸಹವಾದುದು. ಪಂಡಿತವರೇಣ್ಯರು ವಿಸ್ತಾರವಾಗಿ ವಿಮರ್ಶಿಸಿದಾಗ ಈ ಕೀರ್ತನೆಗಳ ಮೌಲ್ಯ ವರ್ಧನೆಯಾಗಿ ಮೆರೆಗು ಹೆಚ್ಚುವುದು ನಿರ್ವಿವಾದ. ಈ ದಿಸೆಯಲ್ಲಿ ಹೆಚ್ಚಿನ ಪ್ರಯತ್ನ ಅಪೇಕ್ಷಣೀಯ. ಅವರ ಕೀರ್ತನೆಗಳ ಸಂಪಾದನೆ ಮತ್ತು ಪ್ರಕಟನಾ ಕಾರ್ಯ ಒಂದು ಅಭಿನಂದನೀಯ ಸಾಹಸ. "ಪಾವಂಜೆ ಹರಿದಾಸವಾಣೀ" ಎಂಬ ಈ ಅಪೂರ್ವಕೃತಿ ಭಕ್ತಿರಸದ ಪ್ರವಾಹಕ್ಕೆ ಕಳೆಯೇರಿಸಿ, ನಮ್ಮೆಲ್ಲರ ಬಾಳನ್ನು ಬೆಳಗಲೆಂದು ಹಾರೈಸುತ್ತೇನೆ.

**ಗ್ರಂಥ ಋಣ-"ಪಾವಂಜೆ ಹರಿದಾಸವಾಣಿ**

**ಕೃತಜ್ಞತೆ-"ಪಾವಂಜೆ ಹರಿದಾಸವಾಣಿ ಗ್ರಂಥವನ್ನು ನನ್ನ ಕೈಗಿತ್ತು ಅವಲೋಕನಕ್ಕೆ ಅವಕಾಶ ಮಾಡಿಕೊಟ್ಟ ನನ್ನ ಭಾವ ಸುರತ್ಕಲ್ ಗೋವಿಂದದಾಸ ಕಾಲೇಜಿನ ವಿಶ್ರಾಂತ ಉಪನ್ಯಾಸಕರಾದ ಶ್ರೀ ಸೋಮಶೇಖರರಾವ್ ಹೆಜಮಾಡಿ ಇವರನ್ನು ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತೇನೆ.**

## ಮಾಂಗಲ್ಯಂ ತಂತುನಾನೇನ ....

ಶರವೂರು ಶ್ರೀಮತಿ ಅನ್ನಪೂರ್ಣ ಕೃಷ್ಣರಾವ್ ಪುತ್ತೂರು ಇವರ ಪುತ್ರ **ಶ್ರೀಕಾಂತ್** ಹಾಗೂ ಶ್ರೀಮತಿ ಅಜೆಕಾರು ಭಾರ್ಗವಿ ಕೃಷ್ಣರಾಯರ ಪುತ್ರಿ **ವಿಶ್ಮಾ** ಇವರ ವಿವಾಹವು ದಿನಾಂಕ 23-08-2013ರಂದು ಉಡುಪಿ ಕಿನ್ನಿಮೂಲ್ಕಿ ಶ್ರೀ ಗೋವಿಂದ ಕಲ್ಯಾಣ ಮಂಟಪದಲ್ಲಿ ನೆರವೇರಿತು.

## ಶುಭ ಜನನ

ಮುಕ್ಕದಲ್ಲಿ ವಾಸ್ತವ್ಯದಲ್ಲಿರುವ ಶ್ರೀ ಎಸ್ ಸಂದೇಶ್ ರಾವ್ (ಶ್ರೀ ಎಸ್ ರಾಜರತ್ನಾಕರ ರಾವ್ ಹಾಗೂ ಶ್ರೀಮತಿ ಸುಮತಿ ಆರ್.ರಾವ್ ದಂಪತಿಗಳ ಪುತ್ರ) ಹಾಗೂ ಶ್ರೀಮತಿ ಕವಿತಾ ಇವರಿಗೆ ತಾ.01-10-2013ರಂದು ಹೆಣ್ಣು ಶಿಶುವಿನ ಜನನ.

★★★★

ಉಡುಪಿಯಲ್ಲಿ ವಾಸ್ತವ್ಯದಲ್ಲಿರುವ ಭಾರತೀಯ ಜೀವವಿಮಾ ನಿಗಮದ ಉದ್ಯೋಗಿ ಆಳುಗ್ಗೇಲು ಸುಭಾಶ್ಚಂದ್ರ ರಾವ್ ಮತ್ತು ಶ್ರೀಮತಿ ಸಂಗೀತಾ ರಾವ್ ದಂಪತಿಗಳಿಗೆ ತಾ.15-09-2013 ರಂದು ಹೆಣ್ಣು ಶಿಶುವಿನ ಜನನ.

## ಚಾಲಕನಿಗೆ ಮೊರೆ

ಚಾಲಕಾ... ನಾನಿನ್ನಾ ನಂಬಿದೆ...
ನೀ ಚಾಲಕಿನಿಂದ ನಡೆಸೆನ್ನುವೆ... ।।ಚಾ।।
ರಸ್ತೆಯೋ ಹೊಂಡಗಳ ಆಗರಾ..।
ಇಲ್ಲಿ ಗಿಜಿಗಿಡುವಾ ಜನಸಾಗರಾ ।।
ರಕ್ಷಿಸೋ ಹೊಂಡಕೆ ಹಾಕದೇ ।ನೀ।
ತಪ್ಪಿಸೋ ಅಪಘಾತ ಸಾವಿರಾ ।।ಚಾ।।
ಅತ್ತಿತ್ತ ನೋಡದಿರು ಚಾಲಕಾ ।ಅಲ್ಲಿ।
ಅಶ್ಲೀಲ ಚಿತ್ರಗಳೂ ಚಾಲಕಾ।।
ಚಿತ್ತಾವ ಕೆಡಿಸ್ಯಾವು ಚಾಲಕಾ ।ನಿನ್ನಾ।
ದಿಟ್ಟೀಯ ನೇರವಿಡು ಚಾಲಕಾ ।।ಚಾ।।
ಉಬ್ಬು ತಗ್ಗುಗಳಿವೆ ಚಾಲಕಾ ।ನೀ।
ತಬ್ಬಿಬ್ಬಾಗದಿರು ಚಾಲಕಾ ।।
ಒಬ್ಬಳೇ ಮಡದಿಯಾ ಮನೆಯಲ್ಲಿ ।ಬಿಟ್ಟು।
ಒಬ್ಬನೇ ಬಂದಿರುವೇ ಚಾಲಕಾ ।।ಚಾ।।
ಸ್ಪರ್ಧೆಯಾ ಕಣವಿದೂ ಚಾಲಕಾ ।ಇಲ್ಲಿ।
ಸಾವಿರ ಸ್ಪರ್ಧೆಯು ಚಾಲಕಾ।।
ಸ್ಪರ್ಧೆಗೆ ನೀ ಇಳಿಯದಿರು ಚಾಲಕಾ ।ಇದು।
ಸರಕಾರಿ ಬಸ್ಸಲ್ಲಾ ಚಾಲಕಾ ।। ಚಾ ।।
ವಕ್ರವಾಗಿದೆ ರಸ್ತೆ ಚಾಲಕಾ ನೀ ಚಕ್ರಾವ ।
ತಿರುಗಿಸೋ ಜಾಗ್ರತೇ।।
ಚಕ್ರಧರಾ ನಮ್ಮ ಚಕ್ರೇಶ ಚಾಲಕಾ ।
ವಕ್ರ ಬುದ್ಧೀಲಿ ನಿನ್ನ ವಂದಿಪೆ।।

–ಸಾವಿತ್ರಿ ಮನೋಹರ್

## ತುಲಾ ಮಾಸದ ವಿಶೇಷ ದಿನಗಳು

| | |
|---|---|
| 17-10-2013 | ತುಲಾ ಸಂಕ್ರಮಣ, |
| 18-10-2013 | ಪೂರ್ಣಿಮಾ |
| 22-10-2013 | ಸಂಕಷ್ಟ ಚತುರ್ಥಿ ಚಂದ್ರೋದಯ ರಾತ್ರಿ- 8.45ಕ್ಕೆ |
| 23-10-2013 | ಸ್ವಾತೀ ನಕ್ಷತ್ರಾರಂಭ |
| 30-10-2013 | ಸರ್ವೇಕಾದಶೀ |
| 01-11-2013 | ಪ್ರದೋಷಃ ಜಲ ಪೂರಣ |
| 02-11-2013 | ನರಕ ಚತುರ್ದಶೀ |
| 03-11-2013 | ಅಮವಾಸ್ಯಾ ಬಲೀಂದ್ರ ಪೂಜಾ |
| 04-11-2013 | ಗೋಪೂಜಾ ತುಳಸೀ ಪೂಜಾರಂಭ |
| 06-11-2013 | ವಿಶಾಖಾ ನಕ್ಷತ್ರಾರಂಭ |
| 13-11-2013 | ಸರ್ವೇಕಾದಶೀ |
| 14-11-2013 | ಉತ್ಥಾನ ದ್ವಾದಶೀ |
| 16-11-2013 | ವೃಶ್ಚಿಕ ಸಂಕ್ರಮಣ |

# ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ



ಡಾ। ವೈ. ಸುದರ್ಶನ ರಾವ್

**ಪ್ರಶ್ನೆ : ಇನ್ಫೆಕ್ಷನ್ (infection) ಆಗುವುದು ಎಂದರೇನು? ಇದರ ಚಿಕಿತ್ಸೆ ಹೇಗೆ?**

**ಭಾಗ-2**

**ಉತ್ತರ :** ಸೂಕ್ಷ್ಮಜೀವಿಗಳ ಆಕ್ರಮಣವನ್ನು ತಡೆಯಲು ನಮ್ಮ ದೇಹದಲ್ಲಿ ರಕ್ಷಣಾ ವ್ಯವಸ್ಥೆಯೊಂದಿದೆ. ಇದನ್ನು ರೋಗನಿರೋಧಕ ವ್ಯವಸ್ಥೆ ಎನ್ನುತ್ತೇವೆ. ಮೊತ್ತ ಮೊದಲಿಗೆ ದೇಹವು ತನ್ನೊಳಗೆ ಪ್ರವೇಶಿಸಿದ ಜೀವಿಗಳನ್ನು ಸೀನುವುದು, ಕೆಮ್ಮುವುದು, ತುರಿಸುವುದು, ವಾಂತಿ ಮಾಡುವುದು, ಬೇದಿಯಾಗುವುದು ಹೀಗೆ ಇಂತಹಾ ಅನೇಕ ವಿಧಾನಗಳ ಮೂಲಕ ಹೊರದೂಡಲು ಪ್ರಯತ್ನಿಸುತ್ತದೆ ಹಾಗೂ ಹೆಚ್ಚಿನ ಸಂದರ್ಭಗಳಲ್ಲಿ ಯಶಸ್ವಿಯಾಗುತ್ತದೆ ಕೂಡ. ಇನ್ನೂ ಒಳಗೆ ಬಂದ ರೋಗಾಣುಗಳನ್ನು ಅವು ಒಳಗೆ ಬಂದ ಜಾಗದಲ್ಲಿ ಕೆಲವು ದ್ರವಗಳನ್ನು ಸ್ರವಿಸುವ ಮೂಲಕ ಹೊರಹಾಕಲು ಪ್ರಯತ್ನಿಸುತ್ತದೆ ಉದಾ:ಸಿಂಬಳ, ಕಫ, ಬಾವು. ಇಷ್ಟೆಲ್ಲಾ ಮಾಡಿಯೂ ಇನ್ನೂ ಉಳಿದ ಸೂಕ್ಷ್ಮ ಜೀವಿಗಳನ್ನು ಕೊಲ್ಲಲು ನಮ್ಮ ದೇಹದಲ್ಲಿ ಕೆಲವು ವಿಶೇಷ ಅಂಗಾಂಶಗಳಿವೆ. ನಮ್ಮ ದೇಹದ ಪ್ರತಿಯೊಂದು ಭಾಗದಲ್ಲಿರುವ ದುಗ್ದರಸ ಗ್ರಂಥಿಗಳೆಂಬ ಅಂಗಾಂಶಗಳು ಹಾಗೂ ರಕ್ತದಲ್ಲಿರುವ ಬಿಳಿರಕ್ತ ಕಣಗಳು ಈ ಕೆಲಸವನ್ನು ನಿಭಾಯಿಸುವ ಅಂಗಾಂಶಗಳು. ನಮ್ಮ ದೇಹವನ್ನು ಪ್ರವೇಶಿಸಿದ ಸೂಕ್ಷ್ಮಜೀವಿಗಳನ್ನು ಅಟಕಾಯಿಸಿ ಕೊಲ್ಲುವುದು ಹಾಗೂ ಈ ಜೀವಿಗಳು ಇನ್ನು ಮುಂದೆಂದಾರೂ ಪುನಃ ಪ್ರವೇಶಿಸಿದರೆ ಗುರುತಿಸಿ ನಾಶಮಾಡುವ ಆಂಟಿಬಾಡಿಗಳೆಂಬ ರಾಸಾಯನಿಕಗಳನ್ನು ತಯಾರಿಸುವುದು ಈ ಅಂಗಾಂಶಗಳ ಕೆಲಸ. ಸೂಕ್ಷ್ಮಜೀವಿಗಳೊಂದಿಗಿನ ಈ ಹೋರಾಟದಲ್ಲಿ ಸೂಕ್ಷ್ಮಜೀವಿಗಳ ಕೈಮೇಲಾದಲ್ಲಿ ರೋಗಿಯ ಪ್ರಾಣಕ್ಕೂ ಎರವಾಗಬಹುದು, ರೋಗನಿರೋಧಕ ವ್ಯವಸ್ಥೆ ಚೆನ್ನಾಗಿದ್ದರೆ ಖಾಯಿಲೆ ಗುಣವಾಗಬಹುದು, ಸಮಬಲವಾದರೆ ಕಾಯಿಲೆಯೊಂದಿಗೆ ಜೀವಿಸಬೇಕಾಗಬಹುದು.

ಹೀಗೆ ಇನ್ಫೆಕ್ಷನ್ನಿಂದಾಗಿ ಬರುವ ಖಾಯಿಲೆಗಳ ಚಿಹ್ನೆಗಳು ಸೂಕ್ಷ್ಮಜೀವಿಯು ಅಕ್ರಮಿಸಿದ ಭಾಗವನ್ನು ಹೊಂದಿಕೊಂಡಿರುತ್ತದೆ. ಚರ್ಮದಲ್ಲಾದರೆ ನೋವು, ಬಾವು. ಶ್ವಾಸಕೋಶದಲ್ಲಾದರೆ ಕೆಮ್ಮುಕಫ. ಜೀರ್ಣಾಂಗವ್ಯೂಹದಲ್ಲಾದರೆ ವಾಂತಿಬೇದಿ ಹೊಟ್ಟೆನೋವು. ಮೂತ್ರದಲ್ಲಾದರೆ ಉರಿ, ನೋವು ಹೀಗೆ ಇನ್ಫೆಕ್ಷನ್ ಚಿಹ್ನೆಗಳನ್ನು ಪಟ್ಟಿಮಾಡಬಹುದು. ಜ್ವರ ಮತ್ತು ಮೈಕೈನೋವು ಎಲ್ಲಾ ಇನ್ಫೆಕ್ಷನ್‌ಗಳಲ್ಲಿರುವ ಸಾರ್ವತ್ರಿಕ ಚಿಹ್ನೆ. ಆಯಾ ಭಾಗದ ದುಗ್ದರಸ ಗ್ರಂಥಿಗಳ ಊತ ಇನ್ನೊಂದು ಮುಖ್ಯ ಚಿಹ್ನೆ (ಆ ಭಾಗದಲ್ಲಿರುವ ಸೂಕ್ಷ್ಮಜೀವಿಗಳನ್ನು ಕೊಲ್ಲುವ ಕಣಗಳನ್ನು ಹಾಗೂ ಆಂಟಿ ಬಾಡಿಗಳನ್ನು ತಯಾರಿಸಲು ದುಗ್ದರಸ ಗ್ರಂಥಿಗಳ ಗಾತ್ರ ದೊಡ್ಡದಾಗುತ್ತದೆ). ಸೂಕ್ಷ್ಮಜೀವಿಗಳು ಒಂದು ಅಂಗದಿಂದ ಇನ್ನೊಂದು ಅಂಗಕ್ಕೂ ಹರಡಬಹುದು. ರಕ್ತದೊತ್ತಡ ಕಡಿಮೆಯಾಗುವುದು, ಮೂತ್ರ ಕಡಿಮೆ ಹೋಗುವುದು, ಕಾಮಾಲೆಯಾಗುವುದು ಇವೆಲ್ಲ ಸೂಕ್ಷ್ಮ ಜೀವಿಗಳದ್ದೇ ಕೈ ಮೆಲಾಗಿರುವ ಚಿಹ್ನೆಗಳು ಇಂತಹ ಸಂದರ್ಭದಲ್ಲಿ ಜೀವಕ್ಕೂ ಅಪಾಯವಾಗಬಹುದು.

ಇನ್ಫೆಕ್ಷನ್‌ನಿಂದ ಬರುವ ರೋಗಗಳ ವಿಶೇಷತೆಯೇನೆಂದರೆ ಇನ್ಫೆಕ್ಷನ್ ಹೇಗಾಗುತ್ತದೆಂದು ತಿಳಿದರೆ ಅದನ್ನು ಸುಲಭವಾಗಿ ತಡೆಗಟ್ಟಬಹುದು. ಉದಾ: ಎಲ್ಲರೂ ಶೌಚಾಲಯದಲ್ಲೇ ಮಲಮೂತ್ರ ವಿಸರ್ಜಿಸುವುದರಿಂದ ಕುಡಿಯುವ ನೀರು ಕಲುಷಿತವಾಗುವುದನ್ನು ತಪ್ಪಿಸಬಹುದು ಹಾಗೂ ಕಲುಷಿತ ನೀರಿನಲ್ಲಿರುವ ರೋಗಾಣುಗಳಿಂದ ಬರುವ ಖಾಯಿಲೆಗಳಿಂದ ಪಾರಾಗಬಹುದು. ಆದರೆ ಇನ್ಫೆಕ್ಷನ್‌ನಿಂದ ರೋಗಗಳನ್ನು ಬರದಂತೆ ತಡೆಗಟ್ಟುವಲ್ಲಿ ಸಾರ್ವಜನಿಕರ ಹಾಗೂ ಸರಕಾರದ ಪ್ರಾಮಾಣಿಕ ಪ್ರಯತ್ನ ಬಹಳ ಮುಖ್ಯ. ಎಲ್ಲಾ ದೇಶಗಳ ಸರಕಾರಗಳು ಸಂಘ ಸಂಸ್ಥೆಗಳು, ವೈದ್ಯಕೀಯ ಸಿಬಂದಿ, ಸಾರ್ವಜನಿಕರು ಎಲ್ಲರೂ ಕೈಜೋಡಿಸಿ, ದೃಢಸಂಕಲ್ಪದಿಂದ ಕಾರ್ಯವೆಸಗಿ, ಸಿಡುಬು ರೋಗವನ್ನು ನಿರ್ಮೂಲನೆ ಮಾಡಿದ್ದೇ ಪ್ರಾಮಾಣಿಕ ಹಾಗೂ ಸಂಘಟಿತ ಪ್ರಯತ್ನ ಯಶಸ್ವಿಯಾಗುತ್ತದೆ ಎಂಬುದಕ್ಕೆ ಒಂದು ಉದಾಹರಣೆ. ಒಂದು ಕಾಲದಲ್ಲಿ ಮಿಲಿಯಗಟ್ಟಲೆ ಜನರ ಸಾವಿಗೂ ಅಂಧತ್ವಕ್ಕೂ ಕಾರಣವಾಗಿದ್ದ ಸಿಡುಬುರೋಗದ ವೈರಸ್ ಈ ಭೂಮಂಡಲದಲ್ಲೇ ಇಲ್ಲದಂತೆ ನಾಶಮಾಡಿದ್ದೇವೆಂದರೆ ಆಶ್ಚರ್ಯಪಡಬೇಕಾಗಿಲ್ಲ. ಮನಸ್ಸಿದ್ದರೆ ಇನ್ನೂ ಅನೇಕ ರೋಗಾಣುಗಳನ್ನು ಇದೇ ರೀತಿ ನಾಶಮಾಡಲು ಸಾಧ್ಯವಿದೆ. ಆದರೆ ಎಲ್ಲರ ಕೈಗಳು ಒಟ್ಟಿಗೆ ಸೇರುತ್ತಿಲ್ಲವಾದ್ದರಿಂದ ಈ ಕೆಲಸ ಆಗುತ್ತಿಲ್ಲ ಅಷ್ಟೇ.

ರೋಗ ನಿರೋಧಕ ಶಕ್ತಿ ಸರಿಯಾಗಿರದವರಲ್ಲಿ ಹಾಗೂ ದೇಹದ ಹಾಗೂ ಪರಿಸರದ ಶುಚಿತ್ವವನ್ನು ನಿರ್ಲಕ್ಷಿಸುವವರಲ್ಲಿ ಇನ್ಫೆಕ್ಷನ್ನಿಂದಾಗಿ ಖಾಯಲೆಗಳು ಸಾಮಾನ್ಯ. ಹಾಗಾಗಿ ಮಕ್ಕಳಲ್ಲಿ, ವೃದ್ಧರಲ್ಲಿ, ಸಿಹಿಮೂತ್ರ ರೋಗಿಗಳಲ್ಲಿ, ಏಡ್ಸ್‌ರೋಗಿಗಳಲ್ಲಿ, ಬುದ್ದಿಮಾಂದ್ಯರು ಹಾಗೂ ಮಾನಸಿಕ ರೋಗಿಗಳಲ್ಲಿ, ಮದ್ಯ ಹಾಗೂ ಮಾದಕ ದ್ರವ್ಯವ್ಯಸನಿಗಳಲ್ಲಿ, ಕ್ಯಾನ್ಸರ್ ರೋಗಿಗಳಲ್ಲಿ, ಅಪೌಷ್ಟಿಕತೆಯಿಂದ ನರಳುವವರಲ್ಲಿ, ಇನ್ಫೆಕ್ಷನ್‌ನ್ನಿಂದಾಗಿ ಖಾಯಿಲೆ ಬರುವುದು ಬೇಗ. ಇಂತಹವರಲ್ಲಿ ಫಂಗಸ್ ಹಾಗೂ ಇತರರನ್ನು ಸಾಮಾನ್ಯವಾಗಿ ಕಾಡದ ಇತರ ಸೂಕ್ಷ್ಮಜೀವಿಗಳಿಂದ ಕಾಯಿಲೆ ಬರುವ ಸಾಧ್ಯತೆ ಹೆಚ್ಚಿರುತ್ತದೆ ಹಾಗೂ ಬಂದ ಖಾಯಿಲೆಗಳೂ ತೀವ್ರ ರೂಪಕ್ಕೆ ತಿರುಗುವ ಸಾಧ್ಯತೆಗಳು ಹೆಚ್ಚಿರುತ್ತದೆ.

ಬ್ಯಾಕ್ಟೀರಿಯಾಗಳನ್ನು ಕೊಲ್ಲುವ ಔಷಧಿಗಳನ್ನು ಆಂಟಿಬಯಾಟಿಕ್ ಎಂದು ಕರೆಯುತ್ತೇವೆ. ಇವುಗಳು ರಾಸಾಯನಿಕ ಪದಾರ್ಥಗಳು. ಇವುಗಳನ್ನು ಸೇವಿಸಿದಾಗ ನಮ್ಮ ದೇಹದ ಜೀವಕೋಶಗಳಿಗೆ ಹಾನಿಯುಂಟುಮಾಡದೆ ರೋಗಾಣುಗಳನ್ನು ಕೊಲ್ಲುತ್ತವೆ. ಆಂಟಿ ಬಯಾಟಿಕ್ ಕ್ಷೇತ್ರದಲ್ಲಿ ವಿಜ್ಞಾನ ಅದ್ಭುತ ಪ್ರಗತಿ ಸಾಧಿಸಿದೆ. ಆದುದರಿಂದ ಅತ್ಯುತ್ತಮ ಆಂಟಿಬಯಾಟಿಕ್‌ಗಳು ವೈದ್ಯರ ಬತ್ತಳಿಕೆಯಲ್ಲಿವೆ. ಹಾಗೆಯೇ ವೈರಸ್‌ಗಳನ್ನು, ಅಮೀಬಾಗಳನ್ನು ಹಾಗೂ ಇತರ ಸೂಕ್ಷ್ಮಜೀವಿಗಳನ್ನು ಕೊಲ್ಲುವ ಬೇರೆಬೇರೆ ಔಷಧಗಳಿವೆ. ಖಾಯಿಲೆತಂದ ರೋಗಾಣುವನ್ನು ಸರಿಯಾಗಿ ಗುರುತಿಸಿ, ಸೂಕ್ತ ಔಷಧವನ್ನು ಸೂಕ್ತ ಪ್ರಮಾಣದಲ್ಲಿ ಸೇವಿಸಿದರೆ ಈ ಔಷಧಗಳಿಗೆ ಕೆಲವು ಅಡ್ಡಪರಿಣಾಮಗಳಿದ್ದರೂ ಕಾಯಿಲೆ ಗುಣಪಡಿಸುವಲ್ಲಿ ಸಹಕಾರಿಯಾಗಿವೆ.

ಸೂಕ್ಷ್ಮಜೀವಿಗಳು ನಮ್ಮಂತೆಯೆ ಜೀವಿಗಳು ಹಾಗೆಯೇ ಅವುಗಳೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪ್ರಯತ್ನಿಸುವುದು ಪ್ರಕೃತಿ ಸಹಜ ಗುಣ. ಈ ಪ್ರಯತ್ನದಿಂದಾಗಿ ಸೂಕ್ಷ್ಮಜೀವಿಗಳು ಆಂಟಿಬಯಾಟಿಕ/ಔಷಧಗಳಿಂದಲೂ ಸಾಯದೇ ಇರುವ ಹಾಗೆ ತಮ್ಮ ಜೀವಕೋಶದೊಳಗೆ ಕೆಲವು ಮಾರ್ಪಾಡು ಮಾಡಿಕೊಳ್ಳುತ್ತವೆ. ಹೆಚ್ಚಾಗಿ ಅರೆಮನಸ್ಸಿನಿಂದ ಆಂಟಿಬಯಾಟಿಕ್‌ಗಳನ್ನು ಬಳಸಿ ಅರ್ಧಕ್ಕೆ ಚಿಕಿತ್ಸೆ ನಿಲ್ಲಿಸಿದ ರೋಗಿಗಳಲ್ಲಿ ಬದುಕಿ ಉಳಿದ ರೋಗಾಣುಗಳು ಈ ರೀತಿ ಆಂಟಿಬಯಾಟಿಕ್/ಔಷಧಗಳಿಂದ ಸಾಯದೇ ಇರುವ ಶಕ್ತಿಯನ್ನು ಬೆಳೆಸಿಕೊಳ್ಳುತ್ತವೆ ಹಾಗೂ ತಮ್ಮ ಸಂತಾನಕ್ಕೂ ಈ ಶಕ್ತಿಯನ್ನು ವರ್ಗಾಯಿಸುತ್ತವೆ. ಇಂತಹಾ ಜೀವಿಗಳಿರುವ ರೋಗಿಯಿಂದ ರೋಗಾಣುಗಳು ನಮ್ಮ ದೇಹಕ್ಕೂ ವರ್ಗಾವಣೆಯಾದಾಗ ನಮಗೂ ಆ ಆಂಟಿಬಯಾಟಿಕ್/ಔಷಧ ಉಪಯೋಗಿಸಿ ಗುಣಸಿಗದು. ಹೀಗೆ ರೋಗಾಣುಗಳು ಆಂಟಿಬಯಾಟಿಕ್‌ಗಳಿಗೆ ವಿರೋಧ ಶಕ್ತಿ ಬೆಳೆಸಿಕೊಳ್ಳುತ್ತಿರುವುದೇ ದೊಡ್ಡ ಸಮಸ್ಯೆಯಾಗಿದೆ ಹಾಗೂ ಈ ರೀತಿ ನಿರೋಧಶಕ್ತಿ ಉಳ್ಳ ರೋಗಾಣುಗಳು ತೀವ್ರರೂಪದ ಕಾಯಿಲೆ ತರುತ್ತಿರುವುದು ಸಮಸ್ಯೆಯ ಗಂಭೀರತೆಯನ್ನು ಹೆಚ್ಚಿಸಿದೆ. ಅನಗತ್ಯವಾಗಿ ಆಂಟಿ ಬಯಾಟಿಕಗಳನ್ನು ಬಳಸದಿರುವುದು ಹಾಗೂ ಅಗತ್ಯವಿರುವಾಗಲೆಲ್ಲ ಖಂಡಿತವಾಗಿ ಬಳಸುವುದು ಮಾತ್ರವಲ್ಲ, ಸೂಕ್ತಪ್ರಮಾಣ ಹಾಗೂ ರೋಗಾಣು ಸಂಪೂರ್ಣನಾಶವಾಗುವ ತನಕ ಬಳಸುವುದುದರಿಂದ ರೋಗಾಣುಗಳು ಆಂಟಿಬಯಾಟಿಕ್ ನಿರೋಧಶಕ್ತಿಯನ್ನು ಬೆಳೆಸಿಕೊಳ್ಳುವುದನ್ನು ತಪ್ಪಿಸಬಹುದು.

ನಮ್ಮ ದೇಹದ ರೋಗನಿರೋಧಕ ಶಕ್ತಿಯನ್ನು ಸುಸ್ಥಿತಿಯಲ್ಲಿಟ್ಟುಕೊಂಡರೆ ಇನ್ಫೆಕ್ಷನ್ ಆದರೂ ಕಾಯಿಲೆಯಿಂದ ನರಳುವುದನ್ನು ತಪ್ಪಿಸಿಕೊಳ್ಳಬಹುದು. ಪೌಷ್ಟಿಕ ಹಾಗೂ ಸಮತೂಕದ ಆಹಾರದ ಸೇವನೆ , ಸಾಕಷ್ಟುನಿದ್ದೆ , ವ್ಯಾಯಾಮ, ದುರ್ವ್ಯಸನಗಳಿಂದ ದೂರವಿರುವುದು ಹಾಗೂ ಅತೀ ಮುಖ್ಯವಾಗಿ ತಮ್ಮಲ್ಲಿ ಸಿಹಿಮೂತ್ರದಂತಹಾ ಖಾಯಿಲೆಯಿದ್ದರೆ ಅದಕ್ಕೆ ಸರಿಯಾದ ಚಿಕಿತ್ಸೆಮಾಡಿಕೊಂಡು ಅದನ್ನು ಹತೋಟಿಯಲ್ಲಿಡುವುದು ಹೀಗೆ ನಮ್ಮ ಜೀವನಶೈಲಿಯನ್ನು ಸ್ವಲ್ಪ ಬದಲಾಯಿಸಿಕೊಳ್ಳುವುದರಿಂದ ನಮ್ಮ ರೋಗ ನಿರೋಧಕ ಶಕ್ತಿಯನ್ನು ಸುಸ್ಥಿತಿಯಲ್ಲಿಡಬಹುದು. ಅದೇ ರೀತಿ ವ್ಯಾಕ್ಸಿನ್‌ಗಳೆಂಬ ವಿಶೇಷ ಔಷಧಗಳಿವೆ. ಈ ಔಷಧಿಯಲ್ಲಿ ಒಂದು ಕಾಯಿಲೆಯನ್ನು ತರುವ ಸತ್ತ ಅಥವಾ ನಿಷ್ಕ್ರಿಯಗೊಳಿಸಿದ ಸೂಕ್ಷ್ಮ ಜೀವಿಗಳಿರುತ್ತವೆ. ಈ ಸತ್ತ ಅಥವಾ ನಿಷ್ಕ್ರಿಯಗೊಳಿಸಿದ ಜೀವಿಗಳಿರುವ ವ್ಯಾಕ್ಸಿನನ್ನು ನಮ್ಮ ದೇಹಕ್ಕೆ ಚುಚ್ಚುಮದ್ದು ಅಥವಾ ಬಾಯಿಯ ಮೂಲಕ ಸೇರಿಸಿದಾಗ ನಮ್ಮ ದೇಹವು ಈ ಸತ್ತ ಸೂಕ್ಷ್ಮಜೀವಿಗಳನ್ನು ಆಕ್ರಮಣ ಮಾಡಿದ ನಿಜವಾದ ಸೂಕ್ಷ್ಮಜೀವಿಗಳೆಂದೆಣಿಸಿ ಅವುಗಳನ್ನು ಕೊಲ್ಲುವ ಕೆಲವುವಸ್ತು (ಆಂಟಿಬಾಡಿ)ಗಳನ್ನು ಉತ್ಪಾದಿಸುತ್ತವೆ. ಇದರ ವಿಶೇಷತೆಯೇನೆಂದರೆ ಹೀಗೆ ಒಮ್ಮೆ ನಮ್ಮ ದೇಹವು ಒಂದು ಸೂಕ್ಷ್ಮ ಜೀವಿಯನ್ನು ಕೊಲ್ಲುವ ಆಂಟಿ ಬಾಡಿಗಳನ್ನು ತಯಾರಿಸಿದರೆ ಮುಂದೆ ಬಹಳ ಕಾಲದ ತನಕ ಇದೇ ಜಾತಿಯ ನಿಜವಾದ ಸೂಕ್ಷ್ಮಜೀವಿಯೇನಾದರು ಆಕ್ರಮಣಮಾಡಿದರೆ ಅದರ ವಿರುದ್ಧ ತಕ್ಷಣವೇ ಆಂಟಿಬಾಡಿಗಳನ್ನು ತಯಾರಿಸಿ ಅದನ್ನುಕೊಲ್ಲುವ ಸಾಮರ್ಥ್ಯ ನಮ್ಮ ರೋಗ ನಿರೋಧಕ ವ್ಯವಸ್ಥೆಗೆ ಇರುತ್ತದೆ. ಈ ಉಪಾಯ(ವ್ಯಾಕ್ಸಿನ್)ವನ್ನು ಮನುಷ್ಯರನ್ನು ಸಾಮಾನ್ಯವಾಗಿ ಕಾಡುವ ಕೆಲವು ಭೀಕರ ಕಾಯಿಲೆ ತರುವ ಸೂಕ್ಷ್ಮಜೀವಿಗಳ ವಿರುದ್ಧ ಬಳಸುತ್ತಾರೆ (ಉದಾ: ಟೆಟಾನಸ್, ಪೋಲಿಯೊ).

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322**

## ಶ್ರೀ ಎ. ಕೆ. ರಾವ್



ಕಾರ್ಕಳ ತಾಲೂಕು ನಂದಳಿಕೆಯ ಶ್ರೀ ಮಹಾಲಿಂಗೇಶ್ವರ ಹಿ. ಪ್ರಾ. ಶಾಲಾ ಮುಖ್ಯ ಶಿಕ್ಷಕ ಶ್ರೀ ಎ. ಕೆ. ರಾವ್ 2013ನೇ ಸಾಲಿನ "ಉಡುಪಿ ಜಿಲ್ಲಾ ಸಾಧಕ ಶಿಕ್ಷಕ ಪ್ರಶಸ್ತಿ" ಪುರಸ್ಕೃತರಾಗಿದ್ದಾರೆ. 1980ರಲ್ಲಿ ಸದ್ರಿ ಶಾಲೆಯಲ್ಲಿ ಸಹಶಿಕ್ಷಕರಾಗಿ ಸೇವೆಗೆ ಸೇರಿದ್ದ ಎ.ಕೆ.ರಾಯರು 2005ರಿಂದ ಮುಖ್ಯ ಶಿಕ್ಷಕರಾಗಿ ಕರ್ತವ್ಯದಲ್ಲಿದ್ದಾರೆ. ಒಟ್ಟು 33ವರ್ಷಗಳ ಸೇವಾ ಹಿರಿತನದಲ್ಲಿ ಗಣಿತ–ವಿಜ್ಞಾನ ಬೋಧನೆಯೊಂದಿಗೆ ಶಾಲಾ ಭೌತಿಕ ಸೌಲಭ್ಯಗಳನ್ನು ಒದಗಿಸಿಕೊಳ್ಳುವಲ್ಲಿ ಬಹಳಷ್ಟು ಶ್ರಮಿಸಿದ್ದಾರೆ. ಶಾಲೆಗೆ ನೂತನ ಆರ್‌ಸಿಸಿ ಕಟ್ಟಡ, ಸ್ಮಾರಕ ಸೌಧ, ಮೊದಲಾದ ಶಾಶ್ವತ ಯೋಜನೆಗಳನ್ನು ನಿರ್ಮಿಸಿದ್ದಲ್ಲದೆ, ವರ್ಷಂಪ್ರತಿ ಮಕ್ಕಳ ಸಮವಸ್ತ್ರ ಒದಗಿಸುವಿಕೆ, ವರಕವಿ ಮುದ್ದಣನ ಜನ್ಮ ದಿನ ಆಚರಣೆ, ಹಳೆ ವಿದ್ಯಾರ್ಥಿಗಳ ಗುರುತಿಸುವಿಕೆಗಾಗಿ ಕಿಣ್ಣಣ್ಣ– ಮುಣ್ಣಣ್ಣ ಪ್ರಶಸ್ತಿ ವಿತರಣೆ,ಶಾಲೆಯಲ್ಲಿ ಗೌರವ ಶಿಕ್ಷಕರ ನೇಮಕ ಮೊದಲಾದ ವಿಶಿಷ್ಟ ಕಾರ್ಯ ಸಾಧನೆಗಳ ಮೂಲಕ ಕಾರ್ಕಳ ತಾಲೂಕಿನಲ್ಲಿ "ಉತ್ತಮ ಶಾಲೆ" ಎಂದು ಗುರುತಿಸಿಕೊಳ್ಳಲು ಕಾರಣರಾಗಿದ್ದಾರೆ. ಸಾಮಾಜಿಕವಾಗಿಯೂ ತನ್ನನ್ನು ಗುರುತಿಸಿಕೊಂಡಿರುವ ಎ.ಕೆ.ರಾಯರು ನಂದಳಿಕೆಯ ಸಿರಿ ಜಾತ್ರೆಯಲ್ಲಿ ಪ್ರಧಾನ ಸ್ವಾಗತಗಾರರಾಗಿ, ನಂದಳಿಕೆ ಹಾಲು ಉತ್ಪಾದಕರ ಸಂಘದ ಅಧ್ಯಕ್ಷರಾಗಿ, ಕವಿ ಮುದ್ದಣ ಸಂಘದ ಅಧ್ಯಕ್ಷರಾಗಿ,ಬೆಳ್ಮಣ್ಣು ಲಯನ್ಸ್ ಕ್ಲಬ್‌ನ ಅಧ್ಯಕ್ಷರಾಗಿ ಕಾರ್ಯ ಪ್ರವೃತ್ತರು. ಪ್ರಕೃತ ಕಾರ್ಕಳತಾಲೂಕು ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಶ್ರೀಮತಿ ರಾಜೇಶ್ವರೀಯ ವರನ್ನು ವಿವಾಹವಾಗಿರುವ ಎ.ಕೆ.ರಾಯರು ಇಬ್ಬರು ಗಂಡು ಮಕ್ಕಳು, ಓರ್ವ ಹೆಣ್ಣು ಮಗಳೊಂದಿಗೆ ಸಂತೃಪ್ತ ಜೀವನ ನಡೆಸುತ್ತಿದ್ದಾರೆ. ಶ್ರೀ ಎ.ಕೆ.ರಾಯರ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

## ರಾಧಿಕಾರಾವ್‌ಗೆ ಸನ್ಮಾನ



ಕಾರ್ಕಳ ಜೋಡುರಸ್ತೆ ಶ್ರೀ ಗೋಪಾಲ ಕೃಷ್ಣರಾಯರ ಪತ್ನಿ, ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ ರಾಧಿಕಾರಾವ್ (ಉಡುಪಿ ಇನ್ನಂಜೆಯ ದೇವರಾವ್ ಹಾಗೂ ಲಲಿತಾರ ಪುತ್ರಿ) ಇವರನ್ನು ಅವರ ಸುಧೀರ್ಘ ಸೇವೆಯನ್ನು ಗುರುತಿಸಿ ಇತ್ತೀಚೆಗೆ ನಡೆದ ಸಾರ್ವಜನಿಕ ಸಮಾರಂಭದಲ್ಲಿ ಕಾರ್ಕಳ ಶಾಸಕರಾದ ಶ್ರೀ ಸುನಿಲ್ ಕುಮಾರ್ "ಉತ್ತಮ ಕಾರ್ಯಕರ್ತೆ" ಬಿರುದಿನೊಂದಿಗೆ ಸನ್ಮಾನಿಸಿದರು.

## ಶ್ರೀ ಶ್ರೀನಿವಾಸ ಶರ್ಮ



ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಪಡುಬಿದ್ರಿ ಇದರ ನಿರ್ದೇಶಕರಾಗಿರುವ ಪಾದೆಬೆಟ್ಟು ಶ್ರೀನಿವಾಸ ಶರ್ಮರು ಕಾಪು ಕ್ಷೇತ್ರದ ಭಾರತೀಯ ಜನತಾ ಪಕ್ಷದ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.2000ನೇ ಇಸವಿಯಿಂದ ಸತತ 3 ಬಾರಿ ಪಡುಬಿದ್ರಿಯ ಗ್ರಾಮ ಪಂಚಾಯತಿನ ಸದಸ್ಯರಾಗಿ ಚುನಾಯಿತ ರಾಗಿರುವ ಶ್ರೀನಿವಾಸ ಶರ್ಮರು 2005ರಲ್ಲಿ ಗ್ರಾಮ ಪಂಚಾಯತ್ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ. ದಿವಂಗತ ಪಾದೆಬೆಟ್ಟು ರಾಮಶರ್ಮರ ಪುತ್ರರಾದ ಶ್ರೀನಿವಾಸ ಶರ್ಮರ ಈ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು

## ಅನ್ನಪೂರ್ಣ ರಾಘವೇಂದ್ರರಾವ್



ಉಡುಪಿ ಗುಂಡಿಬೈಲು ಶ್ರೀಮತಿ ಅನ್ನಪೂರ್ಣ ರಾಘವೇಂದ್ರರಾವ್ ಅವರು ಧಾರವಾಡ ಕೇಂದ್ರದಿಂದ ಬರೆದ "ಶರದ್ ಸಿಂಗ್ ಕಿ ಕಥಾ ಸಾಹಿತ್ಯ ಮೆ ಮಾನವೀಯ ಮೌಲ್ಯೋಂಕಿ ಖೋಜ್" ಎನ್ನುವ ಲೇಖನಕ್ಕೆ ಚೆನ್ನೈಯ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾವು ಡಾಕ್ಟರೇಟ್ ಪದವಿ ಪ್ರದಾನ ಮಾಡಿದೆ. ಉಡುಪಿ ಗುಂಡಿಬೈಲಿನ ಯು ಪಿ ರಾಘವೇಂದ್ರ ರಾವ್ ಅವರ ಪತ್ನಿಯಾಗಿರುವ ಶ್ರೀಮತಿ ಅನ್ನಪೂರ್ಣರವರು ಉಡುಪಿಯ ಪೂರ್ಣಪ್ರಜ್ಞಾ ಸಂಧ್ಯಾ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಡಾ। ಮಾಧವಿ ಎಸ್ ಭಂಡಾರಿ ಅವರ ಮಾರ್ಗದರ್ಶನದಲ್ಲಿ ಈ ಪ್ರಬಂಧ ಸಲ್ಲಿಸಿರುತ್ತಾರೆ. ಕಾರ್ಕಳದ ಎಸ್.ವಿ.ಟಿ. ಕಾಲೇಜು ಹಾಗೂ ಮೂಡಬಿದರೆಯ ಮಹಾವೀರ ಕಾಲೇಜಿನಲ್ಲಿ ಉಪನ್ಯಾಸಕ ರಾಗಿದ್ದು ಪ್ರಸ್ತುತ ಉಡುಪಿಯ ಮಹೇಶ್ ಪದವಿಪೂರ್ವ ಕಾಲೇಜಿನಲ್ಲಿ ಉಪನ್ಯಾಸಕ ರಾಗಿರುವ ಶ್ರೀಮತಿ ಅನ್ನಪೂರ್ಣರವರು ಮುದ್ರಾಡಿ ಶ್ರೀ ರಂಗಯ್ಯ ಹೆಬ್ಬಾರ್ ಮತ್ತು ಶ್ರೀಮತಿ ಶಾಂಭವಿ ಹೆಬ್ಬಾರ್ ದಂಪತಿಗಳ ಪುತ್ರಿ. ಶ್ರೀಮತಿ ಅನ್ನಪೂರ್ಣರ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ವಿಳಾಸ ಬದಲಾವಣೆ

**ಎಸ್.ರಾಧಾಕೃಷ್ಣ**
''ಮೈಸೂರು ಮನೆ'', ನಂ.1-115/2,
ಕವಿ ಮುದ್ದಣ ಮಾರ್ಗ, ನಂದಳಿಕೆ,
ಬೆಳ್ಮಣ್ಣು-576111.

★★★ ★★★

**ಸುಹಾಸ್ ರಾವ್**
**ಡಾ। ರಶ್ಮಿ ರಾವ್**
ಎಸ್.ಎಫ್.4 / 2ನೇ ಮಹಡಿ
11ನೇ ಮೈನ್ ರೋಡ್ ಎಂಡ್,
ಪದ್ಮನಾಭ ನಗರ, ಬೆಂಗಳೂರು-560070


## THE REGISTRATION OF NEWS PAPERS (CENTRAL) RULES 1956

### SCHEDULE
### FORM OF DECLARATION
### Form 1 (See Rule-3)

I, Aravinda Kumar, Manipal declare that I am the publisher of the Newspaper entitled iShri Sharada" to be published at Udupi on behalf of Shree Sthanika Dravida Brahmana Sangha,Æ and that particulars in respect of the said News Paper given hereunder are true to the best of my knowledge and belief .

| | | | |
|---|---|---|---|
| 1. | Title of the News Paper | : | **SHRI SHARADA** |
| 2. | Language in which it is to be published | : | **KANNADA** |
| 3. | Periodicity of this publication | : | a) Monthly<br>b) 15th of every month |
| 4. | Registration No | : | Registered Under No.J/UDP/ 1260/2009-2011 Dated from 01-01-2012 to 31-12-2014.<br>Licenced to Post without Prepayment WPP No. SK/MNG/WPP/69 |
| 5. | Retail selling price of the Newspaper per copy | : | Rs 2-50 |
| 6. | Publisherís Name | : | **Aravinda Kumar, Manipal**<br>Secretary, Sri Sthanika Dravida Brahmana Sangha, Æ Kunjibettu, Udupi-576102. |
| 7. | Place of Publication | : | **Sri Sharada Mantapa, Kunjibettu, Udupi - 576102.** |
| 8. | Editorís Name | : | **Sri Krishnakumar Rao, Mattu** |
| | Nationality | : | Indian |
| | Address | : | Sri Sthanika Dravida Brahmana Sangha, Æ Kunjibettu, Udupi-576102. |
| 9. | Printerís Name | : | **Vishnu Moorthy Tantry** |
| | Nationality | : | Indian |
| | Address | : | Agrahara Offsets, Behind Karnataka Bank, Car Street, Udupi - 576101 |
| 10. | Name of the printing press where the Newspaper is actually printed and the true and precise description of the premises on which the press is installed | : | Agrahara Offsets, Behind Karnataka Bank, Car Street Udupi. |
| 11. | Ownerís Name | : | **Sri Sthanika Dravida Brahmana Sangha Æ, Kunjibettu, Udupi-576102** |
| | a) Individual or Firm | : | Firm |
| | b) Whether the owner owns any Newspaper | : | No |
| 12. | Please state whether the declaration is in respect of | : | a) A Monthly Newspaper |

Date : 11-10-2013
Place : UDUPI

Sd/-
The Secretary
For Sri Sthanika Dravida Brahmana Sangha (R), Udupi


## ನಿಧನ

### ಕಾಂತಾವರ ಭೋಜರಾವ್

ನಿವೃತ್ತ ಶಿಕ್ಷಕ ಕಾಂತಾವರ ಭೋಜರಾಯರು (93ವರ್ಷ) ದಿನಾಂಕ 14-09-2013ರಂದು ಸ್ವಗೃಹದಲ್ಲಿ ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

### ವಿಜಯರಾವ್, ಧಾರವಾಡ

ಧಾರವಾಡದ ಶ್ರೀ ಧರ್ಮಸ್ಥಳ ಇಂಜಿನಿಯರಿಂಗ್ ಕಾಲೇಜಿನಲ್ಲಿ ಅಧಿಕಾರಿಯಾಗಿದ್ದ ವಿಜಯರಾವ್(ದಿ।ಪುತ್ತಿಗೆ ಪದ್ಮನಾಭರಾವ್ ಹಾಗೂ ದಿ।ಲೀಲಾವತಿ ಧಾರವಾಡ ಇವರ ಪುತ್ರ) ದಿನಾಂಕ 27-09-2013ರಂದು ನಿಧನರಾದರು. ಮೃತರು ಪತ್ನಿ ಭಾರತೀಯ ಅಂಚೆ ಇಲಾಖೆಯ ಉದ್ಯೋಗಿ ಶ್ರೀಮತಿ ದಾಕ್ಷಾಯಿಣಿ, ಪುತ್ರಿ ವಿಜಯಾಬ್ಯಾಂಕ್ ಉದ್ಯೋಗಿ ಕು।ವರ್ಷಾ, ಇಬ್ಬರು ಹಿರಿಯ ಸಹೋದರರು ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

### ರಾಧಾಕೃಷ್ಣ ರಾವ್ ಅಜ್ಜಾವರ

ಸುಳ್ಯ ಅಜ್ಜಾವರ ಕರಣಿಕ ರಾಧಾಕೃಷ್ಣರಾವ್(60 ವರ್ಷ) ದಿನಾಂಕ 17-09-2013ರಂದು ಸ್ವಗೃಹದಲ್ಲಿ ನಿಧನರಾದರು. ಮೃತರು ತಾಯಿ, ಪತ್ನಿ, ಓರ್ವ ಪುತ್ರ,ಓರ್ವಪುತ್ರಿ ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

### ಪದ್ಮಾವತಿ

ಕುಚ್ಚೂರು ಕಬ್ಬಿನಾಲೆ ಶ್ರೀ ಕೃಷ್ಣಯ್ಯ ಹೆಬ್ಬಾರರ ಧರ್ಮಪತ್ನಿ ಪದ್ಮಾವತಿಯವರು ಸ್ವಗೃಹದಲ್ಲಿ ದಿನಾಂಕ 23-09-2013ರಂದು ನಿಧನರಾದರು. ಮೃತರು ಪತಿ ಶ್ರೀ ಕೃಷ್ಣಯ್ಯ ಹೆಬ್ಬಾರ್, ಮಗ ಶ್ರೀ ಮಂಜುನಾಥ ಹೆಬ್ಬಾರ್ (ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಜತೆ ಕಾರ್ಯದರ್ಶಿ) ಸಹಿತ ನಾಲ್ವರು ಪುತ್ರರು, ಆರು ಪುತ್ರಿಯರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

# ತಿಂಡಿಪೋತ ಗಣಪತಿ – ಲಲಿತ ಪ್ರಬಂಧ

-ಗೀತಾ ಕುಮಾರಿ ಟಿ.

ನಾನಿಂದೂ ಚಾಪೆಯಿಂದ ಎದ್ದಿರಲಿಲ್ಲ. ಇನ್ನೇನು ಬೆಳಗಾದರೆ ಗಣೇಶ ಹಬ್ಬದ ಸಹಿ ತಿನಿಸುಗಳನ್ನು ಮೆಲ್ಲಬಹುದೆಂಬ ಖುಷಿಯಿಂದಲೇ ಆ ಸಕ್ಕರೆಯ ಸವಿ ನಿದ್ದೆಯಲ್ಲಿ ಬಾಯಿ ಚಪ್ಪರಿಸುತ್ತಿದ್ದೆ. ಆಗಲೇ ಕೇಳಿದ್ದು ಆ ಬಾಂಬ ಸದ್ದು! ನೆಲ ಅದುರಿದಂತಾಯಿತು. ಇದ್ಯಾರೋ ಉಗ್ರಗಾಮಿಗಳೋ, ಭಯೋತ್ಪಾದಕರದೋ ಕೆಲಸವಿರಬೇಕೆಂಬ ಕಲ್ಪನೆಯಲ್ಲಿ ಭಯಗೊಂಡು ಒಮ್ಮೆ ತೆರೆದಿದ್ದ ಕಣ್ಣನ್ನು ಮುಚ್ಚಿ ಮತ್ತೂ ಬಿಗಿಗೊಳಿಸಿದೆ. ಹೊದಿಕೆಯೊಳಗೆ ಮುಖ ಹುದುಗಿಸಿದೆ. ಅಷ್ಟರಲ್ಲಿ ಮತ್ತೆರಡು ಸಲ ಅದೇ ಸದ್ದು ಕೇಳಿಸಿತು.ಈ ಸಲ ಸ್ಫೋಟ ಅಷ್ಟೊಂದು ಜೋರಾಗಿರಲಿಲ್ಲ. ಈಗ ನನ್ನ ಪೆದ್ದು ತಲೆಗೆ ಹೊಳೆದದ್ದು ಗಣೇಶನ ಹಬ್ಬದ ದಿನ ಬಂದೇ ಬಿಟ್ಟಿತು ಎಂದು! ಅಂದರೆ ಬೆಳಗಾಗಿತ್ತು. ನಮ್ಮ ಪಕ್ಕದ ಓಣಿಯಲ್ಲಿ ಸಾರ್ವಜನಿಕವಾಗಿ ಗಣಪತಿಯನ್ನು ಇರಿಸಿದ ಯುವಕಮಂಡಲದವರು ಪಟಾಕಿ ಸಿಡಿಮದ್ದುಗಳನ್ನು ಸ್ಫೋಟಿಸುವುದರ ಮೂಲಕ ಗಣೇಶನನ್ನು ಎದುರುಗೊಂಡಿದ್ದರು.

ಅಯ್ಯೋ, ನನ್ನದೆಲ್ಲ ಸಹಿತಿಂಡಿ ತಿನ್ನುವ ಕನಸು ಕಾಣುವುದರಲ್ಲೇ ಆಯ್ತು. ಇನ್ನು ನಿಜವಾಗಿ ತಿನ್ನುವುದು ಯಾವಾಗ ಎಂದು ಲಗುಬಗೆಯಿಂದ ಎದ್ದು ಮುಖ ತೊಳೆದು ಅಡುಗೆ ಮನೆಗೆ ಹೋದರೆ ಅಲ್ಲಿ ನೋಡಿದ್ದೇನು? ಒಲೆಯಲ್ಲಿ ಬೆಂಕಿ ಕಾಣುತ್ತಿಲ್ಲ. ಕಡುಬಿಗಾಗಿ ತಯಾರಿಸಿದ್ದ ಹಲಸಿನ ಎಲೆಯ 'ಕೊಟ್ಟೆ' ಒಂದು ಕಡೆ ರಾಶಿ ಇತ್ತು. ಪಂಚಕಜ್ಜಾಯದ ಅವಲಕ್ಕಿ, ಅರಳು, ಬೆಲ್ಲ ಮುಂತಾದ ಸಾಮಗ್ರಿಗಳು ಇನ್ನೊಂದೆಡೆಯಲ್ಲಿತ್ತು. ಮೂಗನ್ನು ಎಷ್ಟು ಹಿಗ್ಗಿಸಿದರೂ, ಮೋದಕದ ಪರಿಮಳವೇ ಇಲ್ಲ. ನನಗೆ ತಡೆಯಲಾರದ ಕೋಪ ಬಂದು ಸೀದಾ ಅಮ್ಮನನ್ನರಸಿ ಹೋದೆ. ಅಮ್ಮ ಅಷ್ಟೊತ್ತಿಗಾಗಲೇ ತಣ್ಣೀರಲ್ಲಿ ಸ್ನಾನ ಮಾಡಿ ಮಡಿಯುಟ್ಟು ದೇವರ ಕೋಣೆಯಲ್ಲಿ ಕುಳಿತು ಪೂಜೆ ಮಾಡುತ್ತಿದ್ದಳು. ನಮ್ಮ ಮನೆಯಲ್ಲಿ ಗಣಪತಿಯ ಮೂರ್ತಿ ಇಡಲು ಸಾಧ್ಯವಿಲ್ಲದ ಕಾರಣ ನೀನೇ ಪ್ರತ್ಯಕ್ಷವಾಗಿ ನಮ್ಮ ಮನೆಗೆ ಬಾ ಎಂದು ಕಣ್ಣುಮುಚ್ಚಿ ದೇವರಿಗೆ ಮೊರೆಯಿಡುತ್ತಿದ್ದಳು. ನಾನು ಕೋಪದಿಂದ

''ಅಮ್ಮಾ, ತಿಂಡಿ ಎಲ್ಲಿ?'' ಎಂದು ಕೇಳಿದೆ. ತಪೋಭಂಗವಾದಂತೆ ಅಮ್ಮಾ ಕೆಂಗಣ್ಣಿನ ದೃಷ್ಟಿ ಬೀರಿದಳು.

''ಮೊದಲು ಹೋಗಿ ಸ್ನಾನ ಮಾಡಿ ದೇವರಿಗೆ ನಮಸ್ಕರಿಸು, ನಂತರ ತಿಂಡಿ. ಬೇರೆ ದಿನ ದೇವರ ನೆನಪಾಗದಿದ್ದರೆ ಸಾಯಲಿ. ಈ ದಿನವಾದರೂ ದೇವರನ್ನು ನೆನಪಿಸಿಕೊಳ್ಳಬಾರದೆ'' ಎಂದಳು. ನನಗೆ ಯಾರು ಸಾಯಬೇಕೋ ತಿಳಿಯಲಿಲ್ಲ. ಆದರೂ ಆ ದೇವರೇ ಸಾಯಲಿ ಎಂಬಷ್ಟು ಕೋಪ ಬಂದರೂ ಮಾತಾಡದೆ ಸೀದಾ ಸ್ನಾನಕ್ಕೆಂದು ತೆರಳಿದೆ.

ಅಂತೂ ತಣ್ಣೀರನ್ನು ಮೈಗೆ ಸುರಿದುಕೊಂಡು ದೇವರ ಕೋಣೆಗೆ ಹೋದೆ. ಮನಸ್ಸಿನಲ್ಲಿ ದೇವರಿಗೆ ಬೈದು ಲಗುಬಗೆಯಿಂದ ಅಡುಗೆಕೋಣೆಗೆ ಹೋದೆ. ಅಮ್ಮ ಇದೀಗ ಒಲೆಗೆ ಬೆಂಕಿ ಹಾಕಿ ಹೊತ್ತಿಸಿ ಒಂದೊಂದೆ 'ಕೊಟ್ಟೆ'ಗೆ ಹಿಟ್ಟನ್ನು ಸುರಿದು ಹಬೆ ಪಾತ್ರೆಯಲ್ಲಿಡುತ್ತಿದ್ದಳು. ಇನ್ನು ಇದು ಬೇಯುವುದು ಯಾವ ಕಾಲಕ್ಕೆ ಎಂದು ಗೊಣಗಿಕೊಂಡು ಹೊರಬರುವಷ್ಟರಲ್ಲಿ ಅಮ್ಮ ಕರೆದಳು. ಪಂಚಕಜ್ಜಾಯಕ್ಕೆ ಹಾಕಲು ತೆಂಗಿನಕಾಯಿ ತುರಿದಿಡುವ, ಏಲಕ್ಕಿ ಪುಡಿಮಾಡುವ, ಕಬ್ಬನ್ನು ಚೂರು ಮಾಡುವ ಚಿಕ್ಕಪುಟ್ಟ ಕೆಲಸಗಳು ನನ್ನ ಹೆಗಲೇರಿದವು. ಸಿಟ್ಟು ಬಂದರೂ ಬೇಗನೇ ತಿನ್ನಬಹುದೆಂಬ ಆಸೆಯಿಂದ ಕೆಲಸಗಳನ್ನು ಒಪ್ಪಿಕೊಂಡೆ.

ಸ್ವಲ್ಪ ಹೊತ್ತಿನಲ್ಲಿ ಯುವಕ ಮಂಡಲದ ವಠಾರದಲ್ಲಿ ಮೈಕಾಸುರ ಸಜ್ಜುಗೊಂಡು ಸುತ್ತಲಿನ ಪ್ರದೇಶಗಳ ಜನರ ಕಿವಿಗಳಿಗೆ ಧಾಳಿ ಆರಂಭಿಸಿದನು. ಗಣಪತಿಯ ಲೀಲಾವಿನೋದವನ್ನು ಕೊಂಡಾಡುವ ಧ್ವನಿ ಸುರುಳಿಗಳಿಗೆ ಇದೀಗ ಚಾಲನೆ ಸಿಕ್ಕಿತ್ತು. ಅದಕ್ಕೆ ಕಿವಿಗೊಟ್ಟು ಕೂತಿರುವಾಗ ಮತ್ತೊಂದು ಕಡೆಯಲ್ಲಿ ಇನ್ನೊಂದು ತರಹದ ಸಂಗೀತವಿತ್ತು. ಬ್ರಾಹ್ಮಣೋತ್ತಮರ ಅರ್ಥವಾಗದ ಭಾಷೆಯಲ್ಲಿ ದೇವರನ್ನು ಬೈಯುತ್ತಿರುವ (ಬಹುಶಃ ದೇವರಿಗೆ ಅರ್ಥವಾಗಿರಲಿಕ್ಕಿಲ್ಲ) ಮಂತ್ರಘೋಷಗಳು ದೇವಸ್ಥಾನದೆದುರಿನ ಗೋಪುರದ ತುದಿಗೆ ಕಟ್ಟಿದ ಮೈಕದಿಂದ ಹೊರಬರುತ್ತಿತ್ತು. ಮಂತ್ರಗಳ ಅರ್ಥವನ್ನು ಅರಿಯಲು ಕಷ್ಟಪಡುತ್ತಿರುವಾಗ ಕರ್ಕಶವಾದ.... ಅಲ್ಲಲ್ಲಿ ಸುಮಧುರವಾದ ಸಂಗೀತವೊಂದು ತೇಲಿಬಂತು. ಇನ್ನೊಂದು ಕಡೆಯಿಂದ ಇದು ಸುಮಧುರ ಏಕೆಂದರೆ ಸುಮಂಗಲೆಯವರೆಲ್ಲ ಏಕ ಕಂಠದಿಂದ ಎಲ್ಲರಲ್ಲೂ ಪ್ರತ್ಯೇಕ ಕಂಠವಿದೆ) ಗಣಪತಿಯನ್ನು ಕುರಿತು ಭಜಿಸುತ್ತಿದ್ದರು. ಅವರ ಎರಡೂ ಕೈಗಳು ತಾಳ ಹಾಕುತ್ತಿದ್ದರೆ, ನನ್ನ ಹೊಟ್ಟೆಯೂ ತಾಳ ಹಾಕುತ್ತಿತ್ತು. ಇದೂ ಸಾಲದೆಂಬಂತೆ ಹತ್ತಿರದಲ್ಲೇ ಇದ್ದ ಮೂರು-ನಾಲ್ಕು ಕ್ಯಾಸೆಟ್ ಅಂಗಡಿಯವರು ಗಣಪತಿಯನ್ನು ಹೊಗಳುವ ಬೇರೆಬೇರೆ ಕ್ಯಾಸೆಟ್‌ನ್ನು ಮೈಕ್‌ನಲ್ಲಿ ಕೇಳುವಂತೆ ಮಾಡಿದ್ದರು. ಒಟ್ಟಿನಲ್ಲಿ ಈ ವರ್ಷ ನಮ್ಮೂರಲ್ಲಿ ಗಣಪತಿಯನ್ನು ಎದುರ್ಗೊಳ್ಳಲು ಭರ್ಜರಿಯ ತಯಾರಿ ನಡೆದಿತ್ತು.

ಅಂತೂ ಅರ್ಧದಿನದ ಉಪವಾಸದಿಂದ ನಂತರ ಕಡುಬು, ಕಾಯಿ ಹಾಲು, ಅರಳು, ಪಂಚಾಕಜ್ಜಾಯ, ಮೋದಕದ ಜೊತೆಗೆ ಮುಂಚಿನ ದಿನವೇ ಮಾಡಿ ಡಬ್ಬಿಯಲ್ಲಿಟ್ಟಿದ್ದ ತಂಬಿಟ್ಟು, ಎಳ್ಳುಂಡೆಗಳೆಲ್ಲ ಹೊರಬಂದು ಗಣಪತಿಯ ಮುಂದೆ ರಾಶಿಬಿದ್ದವು. ಗಣಪತಿ ತಿಂದ ಬಳಿಕ ನಾವು ತಿನ್ನುವುದಂತೆ! ಗಣಪನ ಗೂಡಾಣದಂತ ಹೊಟ್ಟೆಗೆ ಅದು ಎಲ್ಲಿ ಸಾಕಾಗುತ್ತದೆ? ಮತ್ತೆ ನಮಗೆಲ್ಲಿ ಉಳಿಯುತ್ತದೆ ಎಂದು ಡೊಳ್ಳೊಟ್ಟೆ ಗಣಪನನ್ನು ಕೆಕ್ಕರಿಸಿ ನೋಡುತ್ತಾ ನಿಂತೆ. ಹಾಗೆ ಕಣ್ಣುಬಿಟ್ಟ ಪ್ರಭಾವವೋ ಏನೋ ತಟ್ಟೆಯಲ್ಲಿದ್ದ ಒಂದು ವಸ್ತುವೂ ಖಾಲಿಯಾಗಲಿಲ್ಲ. ನನಗೆ ಹೋದ ಜೀವ ಬಂದ ಹಾಗಾಯಿತು. ಗಣಪತಿಯ ನಮಸ್ಕರಿಸುತ್ತಾ ಹೊಟ್ಟೆತುಂಬಾ ತಿಂದೆ (ಬೆಳಗಿನದ್ದೂ ಸೇರಿ)

ಇದೀಗ ಗಣಪತಿಯನ್ನು ನೋಡಲು ಹೊರಟ ಸಂಭ್ರಮ ನೋಡುವುದೇನು? ಸಾಕ್ಷಾತ್ ಗಣಪತಿಯೇ ಬಂದು ಕುಳಿತಿದ್ದಾನೆ ಎನ್ನುವಂತೆ ಕೆತ್ತಿದ ಮೂರ್ತಿಯನ್ನು ನಿರ್ಮಿಸಿದ ಶಿಲ್ಪಿಯ ಕೈಚಳಕಕ್ಕೆ ಬೆರಗಾದೆ. ಗಣೇಶನ ಸೌಂದರ್ಯ ಮನ ಸೂರೆಗೊಳ್ಳುವಂತಿತ್ತು. ಅದಕ್ಕಿಂತಲೂ ಹೆಚ್ಚು ಮನ ಸೆಳೆದದ್ದು ಗಣಪನ ಕಾಲ ಕೆಳಗೆ ಹರಿವಾಣದಲ್ಲಿ ಸೇಬು, ಕಿತ್ತಳೆ, ದ್ರಾಕ್ಷಿ, ಬಾಳೆಹಣ್ಣು, ಮೋದಕ ಕಡುಬು, ಉಂಡೆ ಮೊದಲಾದವುಗಳು ಬಾಯಲ್ಲಿ ನೀರೂರಿಸಿದ್ದವು.

ಅತ್ಯಂತ ಶ್ರದ್ಧಾಭಕ್ತಿಯಿಂದ ಪೂಜೆ ಮಾಡಿದ ಬಳಿಕ ವಿವಿಧ ಸ್ಪರ್ಧೆಗಳು ಆರಂಭವಾಯಿತು. ಸಾರ್ವಜನಿಕ ಭಾಷಣ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಐದು ರೂಪಾಯಿಯ ಚಾಕಲೇಟನ್ನು ಬಹುಮಾನವಾಗಿ ನೀಡಲಾಯಿತು. ಸೋತವರಿಗೆಲ್ಲ ಖುಷಿಯೋ ಖುಷಿ. ಅವರು ಅಂತಹ ಎರಡೆರಡು ಚಾಕಲೇಟು ಕೊಂಡು ತಿಂದರೆಂದು ಬೇರೆ ಹೇಳಬೇಕೇ?

ಮೊಸರು ಕುಡಿಕೆ ಸ್ಪರ್ಧೆಯ ಗಮ್ಮತ್ತೇ ಬೇರೆ. ಆಚೆ-ಈಚೆ ಎರಡು ಕಂಬ. ಮೇಲ್ತುದಿಯಲ್ಲಿ ಅಡ್ಡಲಾಗಿ ಒಂದು ಕೋಲು ಕಟ್ಟಿ, ಮಧ್ಯದಲ್ಲಿ ಮಣ್ಣಿನ ಕುಡಿಕೆಯಲ್ಲಿ ಓಕುಳಿ ನೀರನ್ನು ತುಂಬಿದ್ದರು. ಪ್ರತಿ ಸ್ಪರ್ಧಿಗೂ ಕೈಲೊಂದು ಕೋಲು ಕೊಟ್ಟು ಕಣ್ಣು ಕಟ್ಟಿ ಬಿಡುತ್ತಿದ್ದರು. ಹಾಗೆ ಮಡಿಕೆ ಒಡೆದವರಿಗೆ ಬಹುಮಾನ.... ಇತ್ಯಾದಿ ಸ್ಪರ್ಧಾ ನಿಯಮದ ಕುರಿತು ಕಾಲುಗಂಟೆ ಭಾಷಣ ಮಾಡಿದರು ವ್ಯವಸ್ಥಾಪಕರು.

50-60 ಜನ ಉತ್ಸಾಹಿಗಳು ಸಾಲಲ್ಲಿ ನಿಂತಿದ್ದರು. ಇರುವುದೊಂದೆ ಮಡಿಕೆ. ಒಂದೇ ಬಹುಮಾನ. ಅಂತದ್ದರಲ್ಲಿ ಮೊದಲ ಸ್ಪರ್ಧಿಯೇ ಮಡಿಕೆ ಒಡೆಯಬೇಕೇ? ಉಳಿದವರ ಮುಖಕ್ಕೆ ಮಂಗಳಾರತಿ ಮಾಡಿದರಾಯ್ತು (ಗಣಪತಿಗೆ ಮಾಡಿದಂತೆ ಅಲ್ಲ)

ಓಕುಳಿಯಾಟದ ಸ್ವಾರಸ್ಯ ದುಃಖಾಂತವಾಗದೆ ಸುಖದಲ್ಲಿ ಮುಗಿದುದೊಂದು ಗಣೇಶನ ಮಹಿಮೆಯಿಂದಲೋ ಏನೋ! ದೇವಸ್ಥಾನದೆದುರು ಓಕುಳಿ ಹೊಂಡವಿತ್ತು. ಹೆಚ್ಚೇನೂ ಆಳವಿಲ್ಲ. ಅದಕ್ಕೆ ತುಂಬ ನೀರು ತುಂಬಿಸಿ, ಬಾವಿಗೆ ರಾಟೆ ಕಟ್ಟುವಂತೆ ಆ ಹೊಂಡದ ಮೇಲೆ ರಾಟೆ ಕಟ್ಟಿ ಬಾಳೆಗೊನೆ ತೂಗಾಡಿಸಲಾಗುತ್ತದೆ. ಹಗ್ಗವನ್ನು ಜಗ್ಗಿದಾಗ ಬಾಳೆಗೊನೆ ಮೇಲೆ ಕೆಳಗೆ ಹೋಗುತ್ತದೆ. ಸ್ಪರ್ಧಿಗಳು ಹಾರಿ ಬಾಳೆಗೊನೆ ಹಿಡಿಯಲು ಪ್ರಯತ್ನಿಸಬೇಕು. ಯಾರಿಗೆ ಗೊನೆ ಸಿಗುತ್ತದೋ, ಅದು ಅವರಿಗೇ. ಹಾಗೆ ಗೊನೆ ಮುಟ್ಟಲು ಹಾರಿದಾಗ ಓಕುಳಿ ಹೊಂಡಕ್ಕೆ ಬೀಳುತ್ತಾರೆ. ಗೊನೆ ಸಿಕ್ಕದಿದ್ದರೆ ನೀರಿನಿಂದ ಮೇಲೆಬಂದು ಮತ್ತೆ ಪ್ರಯತ್ನಿಸಬಹುದು. ಈ ಸ್ಪರ್ಧೆಯನ್ನು ನೋಡುತ್ತಿದ್ದಂತೆ ಒಬ್ಬ ಹುಡುಗ ಬಂದು ಬಾಳೆಗೊನೆಗಾಗಿ ಮೇಲೆ ಹಾರಿದನು. ಗೊನೆಯೇನೋ ಸಿಕ್ಕಿತು. ಆದರೆ ಕೆಳಗೆ ನೀರಿನ ಹೊಂಡಕ್ಕೆ ಬಿದ್ದವನು ಎಷ್ಟೂ ಹೊತ್ತಾದರೂ ಮೇಲೆ ಬರಲಿಲ್ಲ. ಕೊನೆಗೆ ಇನ್ನೊಬ್ಬ ವ್ಯಕ್ತಿ (ಗಣಪತಿ ಅಲ್ಲ) ನೀರಿಗೆ ಹಾರಿ ತಳಕ್ಕೆ ಹೋಗಿ ಹುಡುಗನನ್ನು ಮೇಲಕ್ಕೆತ್ತಿ ಕುಡಿದ ನೀರನ್ನು ಕಕ್ಕಿಸಿ, ಜೀವ ಉಳಿಸಿದ್ದನು. ಅಷ್ಟರೊಳಗೆ ಬಾಳೆಗೊನೆ ಯಾರದೋ ಪಾಲಾಗಿತ್ತು. ಬಾಳೆಗೊನೆ ಹೋದರೇನಂತೆ, ಬದುಕಿದರೆ ಏನನ್ನೂ ತಿನ್ನಬಹುದಲ್ವ? ಸದ್ಯ ಬಾಳೇ ಕೊನೆಯಾಗಲಿಲ್ಲವಲ್ಲ!

ಎಲ್ಲ ಸ್ಪರ್ಧೆಗಳು ಮುಗಿಯುವಾಗ ರಾತ್ರಿಯಾಗಿತ್ತು. ರಾತ್ರಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ಬಹಳಾ ಚೆನ್ನಾಗಿತ್ತಂತೆ. ಹಾಳಾದ ಹೊಟ್ಟೆ ನನ್ನನ್ನು ನೋಡಲು ಬಿಡಬೇಕಲ್ಲ. ನಿದ್ರೆ ಆವರಿಸಿದ ಕಾರಣ ಕಾರ್ಯಕ್ರಮ ನೋಡಲಾಗದಿದ್ದಕ್ಕೆ ವಿಷಾದಿಸುತ್ತೇನೆ.

ಮರುದಿನ ನಿಧಾನವಾಗಿ ಬೆಳಗಾಯಿತು.. ಹಿಂದಿನ ದಿನದ ತಿಂಡಿಗಳನ್ನು ತಿನ್ನುತ್ತಲೇ ಮಧ್ಯಾಹ್ನವೂ ಆಯ್ತು. ಸಂಜೆ ಊರು ಸುತ್ತಲು ಹೊರಟೆನು ದೇವಸ್ಥಾನದ ಗಣಪ, ಯುವಕ ಮಂಡಲದ ವಿನಾಯಕ, ರೋಟರಿಯವರ ವಿಘ್ನೇಶ್ವರ. ಹೀಗೆ ಬೇರೆ ಬೇರೆ ತರದ ಗಣಪಂದಿರು ಬಂದು ಮೆರವಣಿಗೆ ಆಚೆ ಹೋಗುವಾಗ ಇನ್ನೊಂದು ಗುಂಪಿನ ಜನರು ತಮ್ಮ ಗಣಪನನ್ನು ಈಚೆಗೆ ತರುತ್ತಿದ್ದರು. ಹಲವು ನಾಮಧಾರಿಯಾದ ಗಣಪ ಸರ್ವಾಂತರ್ಯಾಮಿ ಎಂಬುದು ಸುಳ್ಳಲ್ಲ ಎಂದು ನನಗೆ ಆಗಲೇ ಸ್ಪಷ್ಟವಾಗಿ ಅರಿವಾದದ್ದು! 'ಗಣಪತಿ ತಿಂಡಿಪೋತ' ಅಲ್ವ, ಅವನು ನಮ್ಮ ಮನೆಯಲ್ಲಿ ಏನೂ ತಿಂದಿಲ್ಲ ಎಂಬ ಮಗುವೊಂದರ ಪ್ರಶ್ನೆಗೆ ಆ ತಾಯಿ ನಮ್ಮ ಮನೇಲಿ ತಿನ್ನದಿದ್ದರೇನಾಯ್ತು? ನಾವು ಮೂರ್ತಿ ಇಟ್ಟಿಲ್ಲವಲ್ಲ. ಅಲ್ಲಿ ಮೂರ್ತಿ ಇಟ್ಟಿದ್ದಾರಲ್ಲ. ಅಲ್ಲಿ ತಿಂದದ್ದೇ ಹೆಚ್ಚಾಗಿ ಹೊಟ್ಟೆ ಒಡೆಯದಿದ್ದರೆ ಪುಣ್ಯ, ಎಂದಾಗ ನನ್ನ ಕೈ ಅಪ್ರಯತ್ನವಾಗಿ ಹೊಟ್ಟೆಯನ್ನು ಸವರಿಕೊಂಡಿತು.

ಇನ್ನು ಗಣಪತಿಯನ್ನು ಕಳುಹಿಸುವ ಕಾರ್ಯಕ್ರಮ ನಾನು ಹೋಗದಿದ್ದರಾಗುತ್ತದೆಯೇ? ನನಗೆ ಉಪಕಾರ ಮಾಡಿದವರಿಗೊಂದು ಧನ್ಯವಾದ ಹೇಳದಿದ್ದರೆ ಅದೇನು ಚಂದ ಅಲ್ಲ? ಗಣಪತಿಯನ್ನು ಕೆರೆಗೆ ಹಾಕಿದಾಗ ಮನಸ್ಸು ಕ್ಷಣಕಾಲ ಭಾರವಾಯಿತು. ಕಣ್ಣು ಮಂಜಾಯಿತು. ಎಷ್ಟು ಒಳ್ಳೆಯ ಗಣಪ... ನನಗೆ ವಿಧ ವಿಧದ ಭಕ್ಷ್ಯ ತಿನ್ನಲು ಅವಕಾಶ ನೀಡಿದ್ದನಾತ. ಇನ್ನು ಇಂತಹ ತಿಂಡಿಗೆ ಇನ್ನೊಂದು ವರ್ಷ ಕಾಯಬೇಕಲ್ವ ಎಂಬ ದುಃಖ ಒತ್ತರಿಸಿಕೊಂಡು ಬಂತು. ಆಗ ಮನೆಯಲ್ಲಿ ಇನ್ನೂ ಹಿಂದಿನ ದಿನದ ಹಳಸಲನ್ನು ಬಿಸಿ ಮಾಡಿ ಇಟ್ಟಿರುವುದು ನೆನಪಾಗಿ 'ಹೊಟ್ಟೆಬಾಕ' ಗಣಪನಿಗೆ ವಂದಿಸಿ, ಆತನನ್ನು ಮನಸ್ಸಿನಿಂದ ತೆಗೆದು ಹಾಕಿ ಮನೆಯತ್ತ ಓಡಿದೆ. ತಿಂಡಿಪೋತ ಗಣಪತಿ ನೀರಿನಲ್ಲಿ ಮಣ್ಣಾಗಿದ್ದ!

## ಕೆಸು ಕಂಡರೆ ನಸುನಗು

–ಸಾವಿತ್ರಿ ಮನೋಹರ್, ಕಾರ್ಕಳ

**ದೀಪಾವಳಿ ಬಂತು ಅಂದ್ರೆ ನೋಡಿ ಓ ಅಲ್ಲಿ ಹೂ ತೋಟದ ತುದಿಯಲ್ಲಿರುವ ಸಣ್ಣ ಕೆರೆಯ ಬಳಿ ತಲೆದೂಗುತ್ತ ಮೈ ಮೇಲಿನ ಮುತ್ತು ಹನಿಗಳನ್ನು ಒಲೆದಾಡಿಸುತ್ತಿರುವ ಕೆಸುವಿನ ಎಲೆಗಳನ್ನು ಕಂಡಾಗ ನನ್ನ ಮುಖದಲ್ಲಿ ನಸುನಗು ಮಿಂಚಿತು. ಯಾಕೆ ಗೊತ್ತಾ? ನಾನು ಮದುವೆಯಾದ ಹೊಸ ದಿನಗಳು ಅವು ದಿನಕ್ಕೊಂದು ಹೊಸ ತಿಂಡಿ ಮಾಡಿ ಗಂಡನಿಂದ ಬೆನ್ನು ಚಪ್ಪರಿಸಿಕೊಳ್ಳವಾಸೆ ನನಗೆ. ಸರಿ ಹದಿನೈದು ದಿನಗಳಲ್ಲಿ ಹತ್ತು ಬಗೆಹೊಸ ತಿಂಡಿ ಮಾಡಿ ಎಲ್ಲರಿಂದ ಅದರಲ್ಲೂ ಗಂಡನಿಂದ ಶಹಬ್ಬಾಸ್‌ಗಿರಿ ಪಡೆದಿದ್ದೆ.**

**ಆವತ್ತು ದೀಪಾವಳಿಯ ದಿನ. ನನ್ನ ಯಜಮಾನರಿಗೆ ರಜೆ. ಸಂಜೆ ಕಾಫಿಗೆ ನನ್ನ ಹೊಸ ರುಚಿ ಬಡಿಸಬೇಕೆಂದು ಕಾತರಳಾಗಿದ್ದೆ. ಎಂದಿನಂತೆ ಮಧ್ಯಾಹ್ನ ರೇಡಿಯೋ ತಿರುಗಿಸಿದಾಗ ವನಿತಾ ವಾಣಿಯಲ್ಲಿ ಪತ್ರೊಡೆ ಮಾಡುವುದು ಹೇಗೆ ಎಂದು ಹೇಳುತ್ತಾ ಇದ್ದರು. ನನಗೆ ಖುಷಿಯಾಯ್ತು ಕೂಡಲೇ ತೋಟಕ್ಕೆ ಓಡಿದೆ. ತಲೆದೂಗುತ್ತಿದ್ದ ಕೆಸುವಿನ ಎಲೆಗಳನ್ನು ಕೊಯ್ದು ತಂದೆ. ನಾರುತೆಗೆದು, ಮಸಾಲೆ ಅರೆದು, ಎಲೆಗೆ ಹಚ್ಚಿ, ಸುರುಳಿ ಸುತ್ತಿ, ಆವಿಯಲ್ಲಿ ಬೇಯಿಸಿ ನಂತರ ಒಂದಿಂಚು ಉದ್ದಕ್ಕೆ ಕತ್ತರಿಸಿ, ಆ ಸುರುಳಿಯ ತುಂಡುಗಳನ್ನು ಕಾವಲಿಯಲ್ಲಿಟ್ಟು, ಕೆಂಪಾಗುವಂತೆ ಎಣ್ಣೆ ಹಾಕಿ ಬೇಯಿಸಿದೆ. ನೀರುಳ್ಳಿ, ಬೇಳೆ, ಕೊತ್ತಂಬರಿಯ ಘಮ ಘಮ ಪರಿಮಳ ಮನೆ ಎಲ್ಲಾ ಹರಡಿ ಅಂಗಳಕ್ಕೂ ಪಸರಿಸಿತು.**

**ಸಂಜೆ ನಿದ್ರೆಯಿಂದ್ದೆದ್ದ ಅತ್ತೆ, ಮಾವ, ನನ್ನ ಯಜಮಾನರು "ವಾಹ್ ಏನಿದು ತಿಂಡಿಯ ಪರಿಮಳ ಘಮ್ಮೆನುತ್ತಿದೆ" ಎಂದು ಅಡುಗೆ ಮನೆಗೆ ನುಗ್ಗಿದರು. ಎಲ್ಲರಿಗೂ ಪತ್ರೊಡೆ, ಕಾಫಿ ತರಲು ಒಲೆ ಬಳಿ ಹೋಗಿದ್ದೆ. ಅವಸರವಸರವಾಗಿ ಪತ್ರೊಡೆ ಒಂದನ್ನು ತಿಂದ ನನ್ನ ಯಜಮಾನ್ರು "ಅಯ್ಯೋ ತುರಿಕೆ....ತುರಿಕೆ.... ಅಮ್ಮಾ ನೀರು" ಎಂದು ಕಿರುಚಿಕೊಂಡಾಗ ತಟ್ಟೆ ಬಳಿ ಬರುತ್ತಿದ್ದ ಅತ್ತೆ, ಮಾವ ಬೆಪ್ಪಾದರು. ಸಾವರಿಸಿಕೊಂಡು ಅತ್ತೆ ಏನಾಯ್ತಪ್ಪಾ ಎಂದಾಗ ನನ್ನವರು ಬಚ್ಚಲು ಮನೆಗೆ ಓಡಿ ಹೋಗಿ ಬಾಯಿ ಮುಕ್ಕಳಿಸುತ್ತಿದ್ದರು. ಅತ್ತೆಗೆ ಅನುಮಾನವಾಯ್ತು. ಒಂದು ಚಿಕ್ಕ ತುಂಡು ಪತ್ರೊಡೆ ಬಾಯಿಗೆ ಹಾಕಿಕೊಂಡು ಕೂಡಲೇ ಮಗನಿಗೊಂದು ಲೋಟ ಹುಳಿ ಮಜ್ಜಿಗೆ ತೆಗೆದುಕೊಂಡು ಹೋಗಿ ಕುಡಿಸಿದರು.**

**ನಡೆದುದಿಷ್ಟೆ. ಪತ್ರೊಡೆ ಮಾಡುವಾಗ ಹುಳಿ ಹಾಕಿರಲೇ ಇಲ್ಲ. ಅತ್ತೆ ಹೊರಬಂದು ಪೆಚ್ಚಾಗಿ ನಿಂತು ನನ್ನನ್ನು ಸಮಾಧಾನಪಡಿಸಿ ಕೆಸುವಿನ ಯಾವುದೇ ತಿಂಡಿ–ಪದಾರ್ಥಗಳಿಗೂ ಹುಳಿ ಹಾಕಲೇಬೇಕು ಇಲ್ಲವಾದರೆ ತುರಿಕೆಯಾಗುತ್ತದೆ ಎಂದು ವಿವರಿಸಿದರು. ದೀಪಾವಳಿ ಬಂದರೆ ನನ್ನ ಗಂಡನ ಅಂದಿನ ಬೊಬ್ಬಾಟ ನೆನೆದರೆ, ಎಲ್ಲೇ ಕೆಸುವಿನ ಎಲೆ ಕಂಡರೆ ನನ್ನ ಮೊಗದಲ್ಲಿ ನಸುನಗು ಮೂಡುತ್ತದೆ.**

## GODDESS ON EARTH

The moment I opened my eyes , I saw a goddess of Love,
She was pure , kind, lovely and fair a dove.
Whenever I cried , she tried to console me,
Her love and affection is as vast as Sea .
She supported me in each and every aspects of life,
And she also takes up the responsibility of being a good daughter , Mother and Wife.
She sacrifices everything for her children without expecting anything in return ,
As her children , our duty is to look nafter her with little more concern.
Her kind heart forgives all the mistakes that I commit,
Without her care and guidance today I would have been aculprit.
There may be thousands of flowers in a garden , but no flower is equal to rose,
I the same way, there may be lots of people who love me, but nobody's love is Equal to my MOM'S

-Pragathi Bhandi Perdoor

# ವೈವಾಹಿಕ ಜೀವನದ ಸುವರ್ಣ ಮಹೋತ್ಸವ



ನಮ್ಮ ಪೂಜ್ಯರಾದ ಶ್ರೀಮತಿ ವಿಮಲಾ ಮತ್ತು ಶ್ರೀ ಬೈಕಾಡಿ ದೇವರಾಜ್ ಇವರು ತಮ್ಮ ವೈವಾಹಿಕ ಜೀವನದ ಸುವರ್ಣ ಮಹೋತ್ಸವವನ್ನು ಬಂಧುಬಾಂಧವರೊಂದಿಗೆ ತಾ.18-08-2013ನೇ ಆದಿತ್ಯವಾರ ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಮಂಟಪದಲ್ಲಿ ಧಾರ್ಮಿಕ ವಿಧಿವಿಧಾನಗಳೊಂದಿಗೆ ನೆರವೇರಿಸಿದರು. ಧಾರ್ಮಿಕ ಕಾರ್ಯಕ್ರಮದ ನಂತರ ಮೊಮ್ಮಕ್ಕಳಾದ ಕು। ಅಪೇಕ್ಷಾ ಉಪಾಧ್ಯಾಯ ಮತ್ತು ಕು। ಆಕಾಂಕ್ಷಾ ಕ್ರಮವಾಗಿ ಶಾಸ್ತ್ರೀಯ ನೃತ್ಯ ಹಾಗೂ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟು ಆಗಮಿಸಿದ್ದ ಬಂಧುಬಾಂಧವರ ಮನಸೂರೆಗೊಂಡರು.

ಶ್ರೀ ದೇವರಾಜ್‌ರವರು ನಾಸಿಕದಲ್ಲಿರುವ ಗೋಖಲೆ ವಿದ್ಯಾಸಂಸ್ಥೆಯ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಮುಂದೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಯೊಂದಿಗೆ ಅದೇ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆಗೆ ಸೇರಿ ಪದೋನ್ನತಿ ಹೊಂದುತ್ತಾ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ನಿವೃತ್ತಿಯ ನಂತರ ಅದೇ ವಿದ್ಯಾಸಂಸ್ಥೆಯ ವಿಭಾಗೀಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಶ್ರೀ ಕಾಮೇಶ್ವರಾನುಗ್ರಹದಿಂದ ದಂಪತಿಗಳು ಆಯುರಾರೋಗ್ಯ ನೆಮ್ಮದಿಯಿಂದ ಸಮಾಜಸೇವೆ ಮಾಡುತ್ತಾ ತಮ್ಮ ವೈವಾಹಿಕ ಜೀವನದ ವಜ್ರಮಹೋತ್ಸವವನ್ನು ಆಚರಿಸುವಂತಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತಾ,

ಶುಭ ಹಾರೈಸುವ

**ಶ್ರೀಮತಿ ಮತ್ತು ಶ್ರೀ ಡಾ। ಬೈಕಾಡಿ ಸೂರ್ಯನಾರಾಯಣ ರಾವ್**
**ಶ್ರೀಮತಿ ವಿದ್ಯಾ, ಶ್ರೀಮತಿ ಪ್ರೀತಿ, ಶ್ರೀ ಹರ್ಷ**

॥ ಕುಂಜಾರು ದುರ್ಗಾದೇವಿ ಪ್ರಸನ್ನ: ॥

# ವೈವಾಹಿಕ ಜೀವನದ ಬೆಳ್ಳಿ ಹಬ್ಬದ ಶುಭಾಶಯಗಳು



ಶ್ರೀ ಕುಂಜಾರು ನರಸಿಂಹ ರಾವ್ ಮತ್ತು
ಶ್ರೀಮತೀ ಜಯಲಕ್ಷ್ಮೀ ಎನ್.ರಾವ್ (ದೊಡ್ಡಣ ಗುಡ್ಡೆ)

ವೈವಾಹಿಕ ಜೀವನದ 25 ಸಂವತ್ಸರಗಳನ್ನು
ಪೂರೈಸಿದ ಈ ಶುಭ ಸಂದರ್ಭದಲ್ಲಿ ನಿಮಗೆ
ಇನ್ನೂ ಹೆಚ್ಚಿನ ಸುಖ -ಸಂಪತ್ತು - ಆರೋಗ್ಯವನ್ನು
ಶ್ರೀ ದೇವರು ಕರುಣಿಸಲಿ ಎಂದು ಹಾರೈಸುವ ,

ಶ್ರೀ ಮಂಜುನಾಥ ರಾವ್ (ಮಗ)
ಶ್ರೀಮತಿ ಶುಭ ಶಿವಪ್ರಸಾದ್ ರಾವ್, ಮುಂಬೈ (ಮಗಳು)
ಶ್ರೀ ಶಿವಪ್ರಸಾದ್ ರಾವ್ ಎಲ್ಲೂರು, ಮುಂಬೈ (ಅಳಿಯ)
ಶ್ರೀಮತಿ ವಿಮಲಾ ಮತ್ತು ಶ್ರೀ ಕುಂಜಾರು ವಾಮನ ರಾವ್,
ಹೊಟೇಲ್ ಸೋನಾ , ಕೊರೆಗಾಂ
ಶ್ರೀಮತಿ ಲೀಲಾ ವಿ. ರಾವ್ , ಮುಂಬೈ
ಶ್ರೀಮತಿ ಚೈತ್ರಾ ಮತ್ತು ಶ್ರೀ ವಸಂತ ರಾವ್ ಕೊರೆಗಾಂ
ಶ್ರೀ ರಾಘವೇಂದ್ರ ರಾವ್ ಕೊರೆಗಾಂ
ಚಿ। ಮಾಸ್ಟರ್ ವೇದಾಂತ್ ರಾವ್ (ಮೊಮ್ಮಗ)


ತಂತ್ರಾಡಿ ವಿಶ್ವನಾಥ ಶಾನುಭೋಗ್
94487 24161
97417 85551



ಶುಭ ಸಮಾರಂಭಗಳ ಛಾಯಾಚಿತ್ರಣ
ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ



**Harikrishna Digitals**
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576 102

**Celebrations**
Conference & Party Hall (Air Conditioned)

HALL AVAILABLE FOR BIRTHDAYS, CONFERENCES,
CORPORATE MEETINGS, CLUB MEETINGS & OTHER FUNCTIONS.



FOR BOOKINGS CONTACT
ANUGRAHA BUILDING, UDUPI - MANIPAL ROAD, LAXMINDRA NAGAR,
KUNJIBETTU POST, UDUPI - 576 102. Mob.: 9632099439
Prop. : ADARSH RAO

*Krishna Rao*
Ph : 2520652
Mob. : 9902029048



**KISHAN**
**Studio & Video**



Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**



ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ
ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



**RAJESH POWER PRESS**
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

ಪ್ರೊ : ಸುಧಾಕರ್ ರಾವ್ ಬೆಳ್ಳೆ



**ಶ್ರೀಮಾತಾ ಇಲೆಕ್ಟ್ರಾನಿಕ್ಸ್**
ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ
ಭೇಟಿ ನೀಡಿ....
ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093


Owned & Published by : U. Aravindakumar - Secretary Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Krishnakumar Rao Mattu, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@yahoo.co.in Website : www.srisharada.org